ವಿಜಯಪುರ | ಸಂಪುಟ 04 | ಸಂಚಿಕೆ 237 | ಪುಟ 04 | ₹ 3.00

https://udayarashminews.com

udayarashmi 90088 88340

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ಶನಿವಾರ, ನವೆಂಬರ್ 14, 2026



"ಪ್ರಿಯಾಂಕ್ ಖರ್ಗೆ ತಮ್ಮ ಹೆಚ್ಚಿನ ಸಮಯವನ್ನು ಆರ್‌ಎಸ್‌ಎಸ್ ಮೇಲೆ ದಾಳಿ ಮಾಡಲು ಮತ್ತು ಪ್ರಧಾನಿ ಮೋದಿಯವರನ್ನು ಗುರಿಯಾಗಿಸಿಕೊಳ್ಳಲು ಕಳೆಯುತ್ತಾರೆ. ಯಾವುದೇ ಪ್ರಕರಣದ ಸಾಧಕ–ಬಾಧಕಗಳ ಬಗ್ಗೆ ಯಾರಾದರೂ ಮಾತನಾಡುವುದಿದ್ದರೆ ಮಾತನಾಡಲಿ. ಆದರೆ, ಕಾನೂನು ಮತ್ತು ಸುವ್ಯವಸ್ಥೆ ವಿಚಾರದಲ್ಲಿ ಸಂಪೂರ್ಣ ವಿಫಲರಾಗಿರುವ ಅವರು ನಮ್ಮ ಪ್ರಧಾನಿಯ ವಿರುದ್ಧ ಈ ರೀತಿ ಅಸಂಬದ್ಧವಾಗಿ ಮಾತನಾಡಲು ಯಾರು?"

■ ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷರು

ಮೇಕೆದಾಟು ಅಣೆಕಟ್ಟು ಯೋಜನೆಗೆ ಅನುಮತಿ ನೀಡಿ

ಮೈಸೂರಿನಲ್ಲಿ 'CoSMOS' ತಾರಾಲಯ ಉದ್ಘಾಟನಾ ಸಮಾರಂಭ | ಪಶ್ಚಿಮ ಘಟ್ಟಗಳಿಗೆ ಸಂಬಂಧಿಸಿದ ಕಸ್ತೂರಿರಂಗನ್ ವರದಿಯ ಶಿಫಾರಸುಗಳನ್ನು ಹಿಂಪಡೆಯಲು ಆಗ್ರಹ | ವೇದಿಕೆಯಲ್ಲೇ ಪ್ರಧಾನಿ ಮೋದಿಗೆ ಸಿಎಂ ಮನವಿ!

ಮೈಸೂರು: ಮೇಕೆದಾಟು ಅಣೆಕಟ್ಟು ಯೋಜನೆಗೆ ಅಗತ್ಯವಿರುವ ಅನುಮತಿ ನೀಡುವಂತೆ ಹಾಗೂ ಪಶ್ಚಿಮ ಘಟ್ಟಗಳಿಗೆ ಸಂಬಂಧಿಸಿದ ಕಸ್ತೂರಿರಂಗನ್ ವರದಿಯ ಶಿಫಾರಸುಗಳನ್ನು ಹಿಂಪಡೆಯುವಂತೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶುಕ್ರವಾರ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದಾರೆ

ರಾಜ್ಯದ 1,000 ಸರ್ಕಾರಿ ಶಾಲೆಗಳನ್ನು 'ಕರ್ನಾಟಕ ಪಬ್ಲಿಕ್ ಶಾಲೆ'ಗಳಾಗಿ ಮೇಲ್ದರ್ಜೆಗೇರಿಸಲು ನೆರವಾಗುವಂತೆ, ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಅಖಖ) ನೀತಿಯನ್ನು ರಾಜ್ಯದ ಮಾರ್ಗಸೂಚಿಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಅವರು ಕೇಂದ್ರವನ್ನು ಕೇಳಿಕೊಂಡಿದ್ದಾರೆ.

ಮೈಸೂರಿನಲ್ಲಿ 'ಅಂಖಐಔಖ'ತಾರಾಲಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಶಿವಕುಮಾರ್, ಪ್ರಧಾನಿ ನರೇಂದ್ರ ಮೋದಿ ಅವರ ಮುಂದೆ ಈ ಬೇಡಿಕೆಗಳನ್ನು ಮುಂದಿಟ್ಟರು. ಪ್ರಮುಖ ಅಭಿವೃದ್ಧಿ ಸವಾಲುಗಳನ್ನು ಎದುರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಹಕಾರದ ಅಗತ್ಯವಿದೆ ಎಂದು ಅವರು ಒತ್ತಿ ಹೇಳಿದರು. ಮೇಕೆದಾಟು ಅಣೆಕಟ್ಟಿನ ಬಗ್ಗೆ ಮಾತನಾಡಿದ ಮುಖ್ಯಮಂತ್ರಿ, ಸುಪ್ರೀಂ ಕೋರ್ಟ್ ಈಗಾಗಲೇ ತನ್ನ ತೀರ್ಪನ್ನು ನೀಡಿದ್ದು, ಕಾನೂನು ವಿಷಯವು ಇತ್ಯರ್ಥಗೊಂಡಿದೆ ಎಂದು ಹೇಳಿದರು.

"ಸರ್, ನೀವು ಕಾವೇರಿ ನದಿಯ ಮೇಲಿನ ಈ ಅಣೆಕಟ್ಟಿನ ಯೋಜನೆಯ ಬಗ್ಗೆ ತಿಳಿದುಕೊಂಡಿದ್ದೀರಿ. ಮೇಕೆದಾಟು ಯೋಜನೆಯನ್ನು ಕರ್ನಾಟಕದಲ್ಲಿ ನಿರ್ಮಿಸಬೇಕು ಎಂದು ಸುಪ್ರೀಂ




ಕೋರ್ಟ್ ಸ್ಪಷ್ಟ ತೀರ್ಪು ನೀಡಿದೆ. ಇದನ್ನು ಯಾರೂ ತಡೆಯಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಕಾನೂನುಬದ್ಧವಾಗಿ ನಮಗೆ ಸಹಾಯ ಮಾಡಿ ಎಂದು ಅವರು ಮನವಿ ಮಾಡಿದರು. ಕುಡಿಯುವ ನೀರಿನ ಈ ಯೋಜನೆಯು ಯಾವುದೇ ವಿಳಂಬವಿಲ್ಲದೆ ಮುಂದುವರಿಯಲು, ಅಗತ್ಯವಿರುವ ಅಂತಿಮ ಶಾಸನಬದ್ಧ ಅನುಮತಿಗಳನ್ನು ನೀಡುವಂತೆ ಅವರು ಕೇಂದ್ರವನ್ನು ಕೋರಿದರು.

"ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡೋಣ. ಈ ನದಿ ಪಾತ್ರದಲ್ಲಿ ಹರಿಯುವ ಕಾವೇರಿ ನದಿಯು ತಮಿಳುನಾಡು, ಪುದುಚೇರಿ, ಕೇರಳ, ಬೆಂಗಳೂರು ಮತ್ತು ಇತರ ಪ್ರದೇಶಗಳಿಗೆ ನೆರವಾಗುತ್ತದೆ. ಆದ್ದರಿಂದ, ನೀವು ನಮಗೆ ಸಹಾಯ ಮಾಡಬೇಕೆಂದು ನಾವು ಬಯಸುತ್ತೇವೆ. ಇದು ಕುಡಿಯುವ ನೀರಿಗಾಗಿ ನಿರ್ಮಿಸಲಾಗುತ್ತಿರುವ ಸಮತೋಲನ ಜಲಾಶಯವಾಗಿದ್ದು, ಇದರಿಂದ ತಮಿಳುನಾಡಿಗೂ ಅನುಕೂಲವಾಗಲಿದೆ ಎಂದು ಅವರು ಪ್ರತಿಪಾದಿಸಿದರು.

'ಅಂಖಐಔಖ' ತಾರಾಲಯ ಕುರಿತು ಮಾತನಾಡಿದ ಶಿವಕುಮಾರ್ ಅವರು, ಪರಂಪರೆ, ಜ್ಞಾನ ಮತ್ತು ಸಂಸ್ಕೃತಿಗೆ ಹೆಸರುವಾಸಿಯಾದ ಮೈಸೂರು ನಗರಕ್ಕೆ ಈ ಸೌಲಭ್ಯವು ಒಂದು ಹೊಸ ವೈಜ್ಞಾನಿಕ ಹೆಗ್ಗುರುತು ಆಗಲಿದೆ ಎಂದರು. ಈ ಯೋಜನೆಯನ್ನು ನಗರಕ್ಕೆ ತಂದಿದ್ದಕ್ಕಾಗಿ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಧನ್ಯವಾದ ಅರ್ಪಿಸಿದರು.

ಕಸ್ತೂರಿರಂಗನ್ ವರದಿಯ ಶಿಫಾರಸ್ಸು ಹಿಂಪಡೆಯಿರಿ



ಪಶ್ಚಿಮ ಘಟ್ಟ ಪ್ರದೇಶಗಳಲ್ಲಿ ವ್ಯಾಪಕ ಸಾರ್ವಜನಿಕ ಸಮಾಲೋಚನೆಗಳನ್ನು ನಡೆಸಿದ ನಂತರ, ಕಸ್ತೂರಿರಂಗನ್ ವರದಿಯ ಶಿಫಾರಸುಗಳನ್ನು ವಿರೋಧಿಸುವ ನಿರ್ಣಯವನ್ನು ಕರ್ನಾಟಕ ಶಾಸನಸಭೆಯು ಸರ್ವಾನುಮತದಿಂದ ಅಂಗೀಕರಿಸಿದೆ ಕಸ್ತೂರಿರಂಗನ್ ವರದಿಯನ್ನು ವಿರೋಧಿಸುವ ಸರ್ವಾನುಮತದ ನಿರ್ಣಯವೊಂದು ನಮಗೆ ಬೇಕಿದೆ, ಈ ವಿಷಯದಲ್ಲಿ ನೀವು ನಮಗೆ ಸಹಾಯ ಮಾಡಬೇಕು ಎಂದು ಸಿಎಂ ಡಿ.ಕೆ.ಶಿವಕುಮಾರ್ ಅವರು ಪ್ರಧಾನಿಯವರ ಬಳಿ ಹೇಳಿದರು.

ಸಿಎಸ್ ಆರ್ ನೀತಿ ರೂಪಿಸಿ



ಪ್ರಾಥಮಿಕ ಶಿಕ್ಷಣ ಮತ್ತು ನಗರ ಕೇಂದ್ರಗಳತ್ತ ವಲಸೆ ಹೋಗುವ ಪ್ರವೃತ್ತಿಯ ಬಗ್ಗೆ ಕಳವಳ ವ್ಯಕ್ತಪಡಿಸಿದ ಸಿಎಂ ಡಿ.ಕೆ. ಶಿವಕುಮಾರ್ ಅವರು, ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ನಡೆಯುತ್ತಿರುವ ಈ ವಲಸೆಯು ಜನಸಂಖ್ಯಾ ಸ್ವರೂಪವನ್ನೇ ಬದಲಾಯಿಸುತ್ತಿದೆ. ಇಂತಹ ವಲಸೆಯು 2002ರಲ್ಲಿ ಶೇಕಡಾ 31ರಷ್ಟಿದ್ದು, 2026ರ ವೇಳೆಗೆ ಶೇಕಡಾ 47ಕ್ಕೆ ಏರಿಕೆಯಾಗಿದೆ. ಇದೇ ಪ್ರವೃತ್ತಿ ಮುಂದುವರಿದರೆ, ಮುಂದಿನ ಎರಡು ದಶಕಗಳಲ್ಲಿ ಇದು ಶೇಕಡಾ 70ರಷ್ಟಾಗುವ ಸಾಧ್ಯತೆಯಿದೆ. ಈ ಸಮಸ್ಯೆಯನ್ನು ನಿಭಾಯಿಸಲು, ಸಿಎಸ್ ಆರ್ ನೀತಿಗಳನ್ನು ಕರ್ನಾಟಕದ ಸಿಎಸ್‌ಆರ್ ಮಾರ್ಗಸೂಚಿಗಳೊಂದಿಗೆ ಸೇರಿಸುವಂತೆ ಸಲಹಾ ಸೂಚನೆ ನೀಡಬೇಕು. ಹೀಗೆ ಮಾಡುವುದರಿಂದ 1,000 ಸರ್ಕಾರಿ ಶಾಲೆಗಳನ್ನು 'ಕರ್ನಾಟಕ ಪಬ್ಲಿಕ್ ಶಾಲೆ'ಗಳಾಗಿ ಮೇಲ್ದರ್ಜೆಗೇರಿಸಲು ಮತ್ತು ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಲು ಸಹಾಯವಾಗುತ್ತದೆ ಎಂದು ಅವರು ಹೇಳಿದರು.

'ಧಗೆ' ಚಿತ್ರದ ಪೋಸ್ಟರ್ ಪ್ರಚಾರದ ಚಾಲನೆ ಇಂದು



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಸಿದ್ದೇಶ್ವರ ದೇವಸ್ಥಾನದ ಆವರಣದಲ್ಲಿ ಚಲನಚಿತ್ರ ಖ್ಯಾತ ನಟ ಹಾಗೂ ಬೆಂಗಳೂರು ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತ ಸಂಗಮೇಶ ಉಪಾಸೆ ಅವರ ಅಭಿನಯದ 'ಧಗೆ' ಚಲನಚಿತ್ರದ ಪೋಸ್ಟರ್ ಪ್ರಚಾರಕ್ಕೆ ಶನಿವಾರ ಬೆಳಗ್ಗೆ 10.30 ಕ್ಕೆ ಚಾಲನೆ ನೀಡಲಾಗುತ್ತಿದೆ.

ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಮಾಜಿ ಶಾಸಕ ರಾಜು ಆಲಗೂರ ಪೋಸ್ಟರ್ ಪ್ರಚಾರಕ್ಕೆ ಚಾಲನೆ ನೀಡಲಿದ್ದಾರೆ.

ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಉಮೇಶ ಕಾರಜೋಳ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಡಾ.ಸುರೇಶ ಬಿರಾದಾರ, ಕರ್ನಾಟಕ ಶೈಕ್ಷಣಿಕ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಸಂಗಮೇಶ ಜಾಧವ, ನಟ ಸಂಗಮೇಶ ಉಪಾಸೆ, ನಿರ್ಮಾಪಕ ಮಡಿವಾಳಪ್ಪ ಗೋಗಿ ಚಾಲನೆಗೆ ಕೈ ಜೋಡಿಸಲಿದ್ದಾರೆ.

'ಧಗೆ' ಚಲನಚಿತ್ರದ ತಾರಾಗಣದ ಕಲಾವಿದರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ಕಬ್ಬು ಕಟಾವು ವಿಚಾರಕ್ಕೆ ತಂದೆ–ಮಗನ ಬಲಿ: ತಡಲಗಿಯಲ್ಲಿ ರಕ್ತಪಾತ!

8 ಎಕರೆ ಜಮೀನು ಲೀಸ್ ವಿವಾದಕ್ಕೆ ಎರಡು ಜೀವಗಳು ಬಲಿ; ಕಲ್ಲು, ಕಟ್ಟಿಗೆ, ಬೊಂಬುಗಳಿಂದ ಮಾರಣಾಂತಿಕ ಹಲ್ಲೆ

■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ಕಬ್ಬು ಕಟಾವು ಮಾಡಿ ಸಕ್ಕರೆ ಕಾರ್ಖಾನೆಗೆ ಸಾಗಿಸುವ ವಿಚಾರವಾಗಿ ಆರಂಭವಾದ ಗಲಾಟೆಯೊಂದು ತಂದೆ–ಮಗನ ಭೀಕರ ಹತ್ಯೆಯಲ್ಲಿ ಅಂತ್ಯವಾದ ಘಟನೆ ತಾಲೂಕಿನ ತಡಲಗಿ ಗ್ರಾಮದಲ್ಲಿ ಶುಕ್ರವಾರ ನಡೆದಿದೆ. ಜಮೀನು ಲೀಸ್ ವಿವಾದದ ಹಿನ್ನೆಲೆಯಲ್ಲಿ ಎರಡು ಕುಟುಂಬಗಳ ನಡುವೆ ಉಂಟಾದ ಘರ್ಷಣೆ ವಿಕೋಪಕ್ಕೆ ತಿರುಗಿ ನಡೆದ ಮಾರಣಾಂತಿಕ ಹಲ್ಲೆಯಲ್ಲಿ ತಂದೆ–ಮಗ ಸ್ಥಳದಲ್ಲೇ ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ. ಈ ಘಟನೆಯಿಂದ ಗ್ರಾಮದಲ್ಲಿ ಆತಂಕ ಹಾಗೂ ಶೋಕದ ವಾತಾವರಣ ನಿರ್ಮಾಣವಾಗಿದೆ.

ತಡಲಗಿ ಗ್ರಾಮದ ಹಣಮಂತ ಯಲ್ಲಪ್ಪ ಸಾಲವಾಡಗಿ (65) ಹಾಗೂ ಅವರ ಪುತ್ರ ಮಂಜುನಾಥ ಹನುಮಂತ ಸಾಲವಾಡಗಿ (30) ಹತ್ಯೆಗೀಡಾದವರು. ಮಹಾದೇವಪ್ಪ, ಮಲ್ಲಪ್ಪ ಹಾಗೂ ಸಿದ್ಧಾರ್ಥ ಗಾಯಗೊಂಡಿದ್ದು, ಗಾಯಾಳುಗಳನ್ನು ವಿಜಯಪುರದ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

8 ಎಕರೆ ಜಮೀನು ಲೀಸ್ ವಿವಾದವೇ ಸಂಘರ್ಷಕ್ಕೆ ಕಾರಣ:

ತಡಲಗಿ ಗ್ರಾಮದ ಹನುಮವ್ವ ಮೇಟಿ ಅವರಿಗೆ ಸೇರಿದ ಸುಮಾರು 8 ಎಕರೆ ಜಮೀನನ್ನು ಸಾಲವಾಡಗಿ ಕುಟುಂಬದವರು ಲೀಸ್‌ಗೆ ಪಡೆದು ಕಬ್ಬು ಬೆಳೆದಿದ್ದರು ಎನ್ನಲಾಗಿದೆ. ಆದರೆ, ಸದರಿ ಜಮೀನಿನಲ್ಲಿ ತಮಗೂ ಪಾಲಿದೆ ಎಂದು ಹನುಮವ್ವ ಅವರ ಸಂಬಂಧಿಕರು





ತಗಾದೆ ತೆಗೆದು ಕಬ್ಬು ಕಟಾವಿಗೆ ವಿರೋಧ ವ್ಯಕ್ತಪಡಿಸಿದ್ದರು.

ಈ ಬಾರಿ ಬೆಳೆದಿರುವ ಕಬ್ಬನ್ನು ಮಾತ್ರ ಕಟಾವು ಮಾಡಿಕೊಂಡು ಹೋಗುತ್ತೇವೆ, ಮುಂದಿನ ಬಾರಿ ಜಮೀನನ್ನು ಲೀಸ್‌ಗೆ ಪಡೆಯುವುದಿಲ್ಲ ಎಂದು ಸಾಲವಾಡಗಿ ಕುಟುಂಬದವರು ತಿಳಿಸಿದ್ದರು ಎನ್ನಲಾಗಿದೆ. ಆದರೆ, ಇದಕ್ಕೆ ಮೇಟಿ ಕುಟುಂಬದ ಸಂಬಂಧಿಕರು ಒಪ್ಪಿರಲಿಲ್ಲ.

ಶುಕ್ರವಾರ ಸಾಲವಾಡಗಿ ಕುಟುಂಬದವರು ಜಮೀನಿಗೆ ತೆರಳಿ ಕಬ್ಬು ಕಟಾವು ಮಾಡಲು ಮುಂದಾದಾಗ ಮೇಟಿ ಕುಟುಂಬದವರು ವಿರೋಧ ವ್ಯಕ್ತಪಡಿಸಿದ್ದಾರೆ. ಈ ವೇಳೆ ಎರಡೂ ಕುಟುಂಬಗಳ ನಡುವೆ ಮಾತಿನ ಚಕಮಕಿ ಆರಂಭವಾಗಿ, ಬಳಿಕ ವಾಗ್ವಾದ ವಿಕೋಪಕ್ಕೆ ತಿರುಗಿದೆ. ಈ ಸಂದರ್ಭದಲ್ಲಿ ಕಲ್ಲು, ಕಟ್ಟಿಗೆ ಹಾಗೂ ಬೊಂಬುಗಳಿಂದ ಪರಸ್ಪರ ಹಲ್ಲೆ ನಡೆದಿದೆ, ಘಟನೆಯಲ್ಲಿ ಹಣಮಂತ ಹಾಗೂ



ಮಂಜುನಾಥ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಹನ್ನೆರಡು ಜನರ ವಿರುದ್ಧ ಪ್ರಕರಣ ದಾಖಲಾಗಿದೆ. ಕೆಂಚಪ್ಪ, ಗಿರಿಯಪ್ಪ, ರಾಮಪ್ಪ, ಹಣಮಂತ ಸೇರಿದಂತೆ ಹಲ್ಲೆ ನಡೆಸಿದ ಐದು ಆರೋಪಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಇನ್ನುಳಿದ ಆರೋಪಿಗಳನ್ನು ಶೀಘ್ರದಲ್ಲಿ ಬಂಧಿಸಲಾಗುವುದು ಎಂದು ಜಿಲ್ಲಾ ಪೊಲೀಸ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.

ಕುಟುಂಬಸ್ಥರ ಆಕ್ರಂದನ:

ತಂದೆ ಹಾಗೂ ಸಹೋದರನನ್ನು ಕಳೆದುಕೊಂಡ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಘಟನೆಗೆ ಸಂಬಂಧಿಸಿದಂತೆ ಮೃತ ಹಣಮಂತ ಅವರ ಪುತ್ರ ಸಂಜೀವ್ ಸಾಲೋಡಗಿ ಹಾಗೂ ಮೃತರ ಸಂಬಂಧಿ ರಮೇಶ ಸಾಲವಾಡಗಿ ಘಟನೆಯ ಹಿನ್ನೆಲೆ ಕುರಿತು ಮಾಹಿತಿ ನೀಡಿದ್ದಾರೆ.

ಘಟನೆ ಕೊಲ್ಹಾರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದು, ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಎಸ್ಪಿ ಲಕ್ಷ್ಮಣ ನಿಂಬರಗಿ, ಡಿವೈಎಸ್ಪಿ ಚಂದ್ರಕಾಂತ ನಂದರೆಡ್ಡಿ, ಸಿಪಿಐ ಶರಣಗೌಡ ಗೌಡರ, ಪಿಎಸ್ ಐ ಅಶೋಕ ನಾಯಕ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಮುಳವಾಡದಲ್ಲಿ ಕ್ಯಾಂಪಾ ಕೋಲಾ ಬೃಹತ್ ಘಟಕದಿಂದ ಹೊಸ ಪರ್ವ ಆರಂಭ!

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಸಮೀಪದ ಮುಳವಾಡದ ಕೈಗಾರಿಕಾ ಅಭಿವೃದ್ಧಿ ಪ್ರದೇಶದ ಜಾಗದಲ್ಲಿ 1,622 ಕೋಟಿ ರೂ. ವೆಚ್ಚದ ನೂತನ ಕ್ಯಾಂಪಾ ಕೋಲಾ ಪಾನೀಯ ಉತ್ಪಾದನಾ ಘಟಕಕ್ಕೆ ನ.16ರಂದು ಭೂಮಿ ಪೂಜೆ ನೆರವೇರುವ ಮೂಲಕ ಈ ಭಾಗದವರ ಕೈಗಾರಿಕೆಗಳ ಆಗಮದ ಕನಸಿಗೆ ರೆಕ್ಕೆ–ಪುಕ್ಕ ಮೂಡಲಿದ್ದು, ಇದರಿಂದ ಸಂತಸ ಇಮ್ಮಡಿಗೊಳಿಸಿದೆ.

ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಎಫ್–ಎಂಸಿಜಿ ವಿಭಾಗವಾದ ರಿಲಯನ್ಸ್ ಕನ್ಸ್ಯೂಮರ್ ಪ್ರಾಡಕ್ಟ್ ಲಿಮಿಟೆಡ್ (ಆರ್‌ಸಿಪಿಎಲ್), ಕೆಐಎಡಿಬಿ ಮುಳವಾಡ ಕೈಗಾರಿಕಾ ಪ್ರದೇಶದಲ್ಲಿ ತನ್ನ ಪ್ರಸ್ತಾವಿತ ಹಸಿರು ಕ್ಷೇತ್ರ ಪಾನೀಯ ಉತ್ಪಾದನಾ ಘಟಕಕ್ಕೆ ಅಂದು ಭೂಮಿ ಪೂಜೆ ನಡೆಯಲಿದೆ.

ಬರಡಾಗಿದ್ದ ಮುಳವಾಡಕ್ಕೆ ಮುಗಿಲವಕಾಶ!

ಸುಮಾರು 16 ವರ್ಷಗಳ ಹಿಂದೆ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಮತ್ತು ಮುರುಗೇಶ ನಿರಾಣಿಯವರು ಕೈಗಾರಿಕೆ ಸಚಿವರಾಗಿದ್ದ ಸಮಯದಲ್ಲೇ ಮುಳವಾಡದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸಾವಿರಾರು ಎಕರೆ ಭೂಮಿಯನ್ನು ಪಡೆದು ನೋಟಿಫಿಕೇಶನ್ ಮಾಡಲಾಗಿತ್ತು. ಅಲ್ಲಿಂದ ಇಲ್ಲಿಯ ತನಕ ಸಣ್ಣಪುಟ್ಟ ಗುಡಿ ಕೈಗಾರಿಕೆಗಳು ಬಿಟ್ಟರೆ ಯಾವೊಂದು ಉದ್ಯಮಗಳೂ ಇಲ್ಲ ತಲೆ ಎತ್ತಿರಲ್ಲ. ದೊಡ್ಡ ದೊಡ್ಡ ಕಂಪನಿಗಳು ಬಂದಿರಲಿಲ್ಲ. ಇಷ್ಟೊಂದು ಪ್ರಮಾಣದ ಭೂಮಿಯನ್ನು ನೀಡಿದ ರೈತರು ಕೂಡ ಬೇಸರಗೊಂಡು ತಾವು ಕೊಟ್ಟ ಜಮೀನು ಪಾಳು ಬಿದ್ದು ಹಾಳಾಗುತ್ತಿದೆ ಎಂದು ಹೇಳುತ್ತಿದ್ದರು. ಇದನ್ನು ಅರಿತಿದ್ದ ಈಗಿನ ಕೈಗಾರಿಕೆ,



ಮೂಲ ಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಹಾಗೂ ಮಾಜಿ ಸಚಿವ, ಬಸವನ ಬಾಗೇವಾಡಿ ಶಾಸಕರಾದ ಶಿವಾನಂದ ಪಾಟೀಲರ ಒತ್ತಾಸೆ ಮತ್ತು ಪ್ರಯತ್ನದಿಂದ ಇಲ್ಲಿ ಕ್ಯಾಂಪಾ ಕೋಲಾದಂತಹ ಬೃಹತ್ ಉದ್ಯಮ ಸಂಸ್ಥೆಯೊಂದು ನೆಲೆಯೂರುವಂತಾಗಿದೆ. ಇದರಿಂದ ಸದ್ಯ ಭೂಮಿ ಕಳೆದುಕೊಂಡಿದ್ದ ಜನರು ತಮ್ಮೂರಲ್ಲಿ ಕೈಗಾರಿಕೆಗಳು ಬರುತ್ತಿರುವುದಕ್ಕೆ ನಿಟ್ಟುಸಿರು ಬಿಟ್ಟು, ತಮ್ಮ ಮನೆಯ ಮಕ್ಕಳಿಗೆ ಉದ್ಯೋಗ ಸಿಗುತ್ತದೆ ಎನ್ನುವ ಭರವಸೆಯಲ್ಲಿ ಇದ್ದಾರೆ. ಸಚಿವ ಎಂ.ಬಿ.ಪಾಟೀಲರಂತೂ ಸತತ ಮೂರು ವರ್ಷದಿಂದ ಈ ಕಂಪನಿ ಆಗಮನಕ್ಕೆ ಯತ್ನಿಸಿದ್ದಾರೆ. ಇದರಿಂದ ಇನ್ನು ಮುಂದೆ ಮುಳವಾಡದಲ್ಲಿ ಅನೇಕ ದೊಡ್ಡ ಉದ್ಯಮಗಳು ಆರಂಭವಾಗುವ ಮುನ್ಸೂಚನೆಯೂ ದೊರೆತಂತಾಗಿದೆ.

5,200 ಉದ್ಯೋಗಗಳ ಸೃಷ್ಟಿ, 1,622 ಕೋಟಿ ಬಂಡವಾಳ!

ಈ ಯೋಜನೆಗೆ ಸುಮಾರು 1,622 ಕೋಟಿ ರೂ. ಹೂಡಿಕೆ ಮಾಡಲಾಗುತ್ತಿದೆ. ಒಟ್ಟು ಕೈಗಾರಿಕಾ ಪ್ರದೇಶದ ಸುಮಾರು 100 ಎಕರೆ ಜಾಗದಲ್ಲಿ ಈ ಘಟಕವನ್ನು ಎರಡು ಹಂತಗಳಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಏಳು ಹೈ–ಸ್ಪೀಡ್ ಉತ್ಪಾದನಾ ಮಾರ್ಗಗಳನ್ನು ಇದು ಹೊಂದಿದ್ದು, ಪೂರ್ಣ ಸಾಮರ್ಥ್ಯದಲ್ಲಿ ವರ್ಷಕ್ಕೆ ಸುಮಾರು 70 ಕೋಟಿ ಲೀಟರ್ ಉತ್ಪಾದನಾ ಸಾಮರ್ಥ್ಯ ಹೊಂದಿರಲಿದೆ. ಎರಡೂ ಹಂತಗಳು ಪೂರ್ಣಗೊಂಡ ನಂತರ ಸುಮಾರು 5,200 ನೇರ ಮತ್ತು ಪರೋಕ್ಷ ಉದ್ಯೋಗಾವಕಾಶಗಳು ಸೃಷ್ಟಿಯಾಗುವ ನಿರೀಕ್ಷೆಯಿದೆ. ಇದರೊಂದಿಗೆ ಪ್ಯಾಕೇಜಿಂಗ್, ಕಚ್ಚಾ ವಸ್ತು ಪೂರೈಕೆ, ಸಾರಿಗೆ ಮತ್ತು ಲಾಜಿಸ್ಟಿಕ್ಸ್ ಸೇರಿದಂತೆ ಇತರ ಪೂರಕ ಕೈಗಾರಿಕೆಗಳಿಗೂ ಇದರಿಂದ ಉತ್ತೇಜನ ದೊರೆಯಲಿದೆ.

ಏನೇನು ತಯಾರು?

ಈ ಘಟಕದಲ್ಲಿ ಕಾರ್ಬೋನೇಟೆಡ್ ಸಾಫ್ಟ್ ಡ್ರಿಂಕ್ಸ್, ಜ್ಯೂಸ್, ರೆಡಿ–ಟು–ಸರ್ವ್ ಪಾನೀಯಗಳು, ಎನರ್ಜಿ ಡ್ರಿಂಕ್ಸ್ ಮತ್ತು ಪ್ಯಾಕೇಜ್ಡ್ ಕುಡಿಯುವ ನೀರು ತಯಾರಿಸಲಾಗುತ್ತದೆ. ಕ್ಯಾಂಪಾ, ಸೋಸಿಯೋ, ರಸ್ಕಿಕ್, ಸನ್‌ಕ್ರಷ್, ಇಂಡಿಪೆಂಡೆನ್ಸ್ ಮತ್ತು ಸ್ಪಿನ್ನರ್ ಸೇರಿದಂತೆ ಆರ್‌ಸಿಪಿಎಲ್‌ನ ವಿವಿಧ ಬ್ರ್ಯಾಂಡ್‌ಗಳಿಗೆ ಈ ಘಟಕ ಬೆಂಬಲ ನೀಡಲಿದೆ.

ಹೊಸ ಅವಕಾಶಗಳ ಹೊಳಹು..

ವಿಜಯಪುರ ಕೈಗಾರಿಕಾ ಅಭಿವೃದ್ಧಿಗೆ ಅಪಾರ ಸಾಮರ್ಥ್ಯ ಹೊಂದಿದೆ. ಇಂತಹ ಹೂಡಿಕೆಗಳು ನಮ್ಮ ಪ್ರದೇಶಕ್ಕೆ ಹೊಸ ಅವಕಾಶಗಳನ್ನು ತೆರೆದಿಡಲಿವೆ. ಆರ್‌ಸಿಪಿಎಲ್‌ನ ಘಟಕವು ಸ್ಥಳೀಯ ಕೈಗಾರಿಕಾ ವ್ಯವಸ್ಥೆಯನ್ನು ಬಲಪಡಿಸಿ, ಉದ್ಯೋಗ ಸೃಷ್ಟಿ ಮತ್ತು ಸಂಬಂಧಿತ ವಲಯಗಳ ವ್ಯವಹಾರಗಳಿಗೆ ಅವಕಾಶ ನೀಡಲಿದೆ. ಸಮತೋಲಿತ ಪ್ರಾದೇಶಿಕ ಅಭಿವೃದ್ಧಿಗೆ ಕೊಡುಗೆ ನೀಡುವ ಹೂಡಿಕೆಗಳಿಗೆ ಕರ್ನಾಟಕ ಸರ್ಕಾರ ಬದ್ಧವಾಗಿದೆ. ವಿಜಯಪುರದಲ್ಲಿ ಆರ್‌ಸಿಪಿಎಲ್ ಹೂಡಿಕೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ ಎಂದು ಹೇಳಲಾಗಿದೆ.

ವಿಜಯಪುರದಿಂದಲೇ ಭಾರತದ ಗುರಿ..

ಭಾರತೀಯ ಗ್ರಾಹಕರನ್ನು ಆಳವಾಗಿ ಅರ್ಥಮಾಡಿಕೊಂಡು ಉತ್ಪಾದನೆ, ವಿತರಣೆ ಮತ್ತು ಪೂರೈಕೆಯಲ್ಲಿ ಹೂಡಿಕೆ ಮಾಡುವ ಮೂಲಕ ಬಲವಾದ ಮತ್ತು ಶಾಶ್ವತ ಗ್ರಾಹಕ ವ್ಯವಹಾರವನ್ನು ಕಟ್ಟುವುದು ತಮ್ಮ ಗುರಿ. ವಿಜಯಪುರ ಘಟಕ ಈ ಕಾರ್ಯತಂತ್ರದ ಪ್ರಮುಖ ಭಾಗವಾಗಿದೆ. ಇದು ಕರ್ನಾಟಕ ಮತ್ತು ನೆರೆಯ ಮಾರುಕಟ್ಟೆಗಳಿಗೆ ಸೇವೆ ನೀಡುವ ನಮ್ಮ ಸಾಮರ್ಥ್ಯವನ್ನು ಹೆಚ್ಚಿಸಲಿದೆ. ಈ ಹೂಡಿಕೆಯು ಕರ್ನಾಟಕದ ಮೇಲಿನ ನಮ್ಮ ದೀರ್ಘಕಾಲೀನ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ ಎಂದು ಆರ್‌ಸಿಪಿಎಲ್ ನಿರ್ದೇಶಕ ಟಿ.ಕೃಷ್ಣಕುಮಾರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಉಕ ಭಾಗಕ್ಕೆ ಬೆಳಕು

ಈ ಯೋಜನೆಯು ಭಾರತದಲ್ಲಿ ಗ್ರಾಹಕ ವ್ಯವಹಾರವನ್ನು ನಿರ್ಮಿಸುವ ಆರ್‌ಸಿಪಿಎಲ್‌ನ ಪ್ರಯಾಣದಲ್ಲಿ ಮತ್ತೊಂದು ಮಹತ್ವದ ಹೆಜ್ಜೆಯಾಗಿದೆ. ಇಂತಹ ಸದವಕಾಶ ವಿಜಯಪುರ ಜಿಲ್ಲೆಗೆ ಒದಗಿ ಅಭಿವೃದ್ಧಿ ಮತ್ತು ದೂರದೃಷ್ಟಿಯ ಮಹತ್ವದ ಹೆಜ್ಜೆ ಮೂಡುವಂತಾಗಿದೆ ಎಂದು ರಾಜ್ಯದ ಕೈಗಾರಿಕೋದ್ಯಮದ ತಜ್ಞರು ವಿಶ್ಲೇಷಿಸುತ್ತಿದ್ದಾರೆ. ಎಲ್ಲ ಕೈಗಾರಿಕೆಗಳು ಹಳೆಯ ಮೈಸೂರು ಭಾಗ ಮತ್ತು ಬೆಂಗಳೂರಿನ ಸುತ್ತಮುತ್ತವೇ ಇರಬೇಕೆನ್ನುವ ಸಂಪ್ರದಾಯವನ್ನು ಇದರಿಂದ ತಗ್ಗಿಸಿ ಉತ್ತರ ಕರ್ನಾಟಕ ಅಭಿವೃದ್ಧಿಗೆ ಇದು ಮುನ್ನುಡಿ ಬರೆಯಲಿದೆ.

ಪಂಚ ತತ್ವಗಳಲ್ಲಿ ಜಲ

- **ನಾವು ನಮ್ಮ ಮುಂದಿನ ಪೀಳಿಗೆಯ ಉಳಿವಿಗಾಗಿ ಜಲ ಸಂರಕ್ಷಣೆಯನ್ನು ಮಾಡಲೇಬೇಕಾಗಿದೆ. ನೀರಿನ ದುರುಪಯೋಗದ ಕುರಿತು ಮಕ್ಕಳಿಗೆ ಅರಿವು ಮೂಡಿಸಬೇಕು. ಎಲ್ಲೆಲ್ಲಿ ನಾವು ನೀರಿನ ದುರ್ಬಳಕೆಯನ್ನು ತಪ್ಪಿಸಬಹುದು ಎಂಬುದನ್ನು ಅರಿತು ಅಂತೆಯೇ ಕಾರ್ಯನಿರ್ವಹಿಸಲು ಮಕ್ಕಳನ್ನು ಸೇರಿದಂತೆ ನಾವು ಕೂಡ ಯುದ್ಧೋಪಾದಿಯಲ್ಲಿ ಜಲ ಮೂಲಗಳನ್ನು ಸಂರಕ್ಷಿಸಬೇಕು.**
- **ಉದಯರಶ್ಮಿ ದಿನಪತ್ರಿಕೆ**



ನಮ್ಮ ಬದುಕಿನಲ್ಲಿ ಅತ್ಯವಶ್ಯಕವಾದ ನೀರನ್ನು ನಾವು ಜಲ,-ಎಂದು ಗಂಗಾ ಮಾತೆ ಎಂದು ಪೂಜಿಸುತ್ತೇವೆ ಭೂಮಿಯ ಮೇಲೆ ಶೇಕಡ 71ರಷ್ಟು ಭಾಗ ನೀರಿದೆ ಎಂದು ಹೇಳುತ್ತಾರೆ.... ಆದರೆ ಈ ಎಲ್ಲಾ ನೀರು ಕುಡಿಯಲು ಯೋಗ್ಯವಲ್ಲ. ನೀರು ಜೀವದಾಯಿನಿ. ಈ ಪೃಥ್ವಿಯ ಮೇಲೆ ನೀರು ಎಲ್ಲೆಡೆ ಇದೆ. ಭೂಮಿಯ ಕೆಳಭಾಗದಲ್ಲಿ ಅಂತರ್ಜಲವಾಗಿ ಆಕಾಶದಲ್ಲಿ ಮೇಘ ರೂಪದಲ್ಲಿ ನೀರಿದೆ. ಸೃಷ್ಟಿಯಲ್ಲಿ ಆವಿಯ ರೂಪದಲ್ಲಿಯೂ ನೀರಿದೆ.

ಬದಲಾದ ಕಾಲಘಟ್ಟದಲ್ಲಿ ನೀರಿನ ಬಳಕೆ ತುಸು ಹೆಚ್ಚೇ ಆಗಿದ್ದು ನಾವು ಹರಿಯುವ ನಲ್ಲಿಯ ಕೆಳಗೆ ಮುಖ ತೊಳೆದುಕೊಳ್ಳುವುದಕ್ಕಿಂತ ತಂಬಿಗೆಯಲ್ಲಿ ಮುಖ ತೊಳೆದುಕೊಳ್ಳುವುದು ಒಳ್ಳೆಯದು. ನೀರು ಅದೆಷ್ಟು ಪ್ರಮಾಣದಲ್ಲಿ ಹರಿಯುತ್ತದೆ ಎಂಬುದು ನಮಗೆ ಗೊತ್ತಾಗುವುದಿಲ್ಲ ಆದ-



'ರೆ ಅವಶ್ಯಕತೆಗಿಂತ ಹೆಚ್ಚು ನೀರು ಹರಿಯುತ್ತದೆ ಎಂದು ಮಾತ್ರ ಅರಿಯಬಲ್ಲೆವು.

ಈ ಹಿಂದೆ ಬಾವಿಯಲ್ಲಿ ನೀರನ್ನು ಸೇದಿ ತರಬೇಕಾಗುತ್ತಿತ್ತು. ಪಾತ್ರೆಗಳನ್ನು ಒಂದು ಬುಟ್ಟಿಯಲ್ಲಿ ಇಟ್ಟುಕೊಂಡು, ಒಗೆಯುವ ಬಟ್ಟೆಯನ್ನು ಗಂಟು ಕಟ್ಟಿಕೊಂಡು ಕೆರೆ ಹೊಳೆ ಹಳ್ಳಗಳಿಗೆ ಒಯ್ದು ಸ್ವಚ್ಚಗೊಳಿಸಿ ತರಲಾಗುತ್ತಿತ್ತು. ಬಹುತೇಕ ಗಂಡಸರು ಸ್ನಾನಕ್ಕೆ ಮನೆಯ ಹತ್ತಿರದ ಬಾವಿ ಹಳ್ಳಗಳನ್ನು ಅವಲಂಬಿಸಿದರೆ ಹೆಣ್ಣು ಮಕ್ಕಳು ಮಧ್ಯಾಹ್ನದ ಹೊತ್ತಿಗೆ ಪಾತ್ರೆ ಬಟ್ಟೆಯೊಂದಿಗೆ ಹೊಳೆಗೆ ನಡೆಯುತ್ತಿದ್ದರು. ಪಾತ್ರೆಗಳನ್ನು ತಿಕ್ಕಿ ತೊಳೆದು ಬಟ್ಟೆಗಳನ್ನು ಒಗೆದು ಹರವಿ ತಾವು ಕೂಡ ಸ್ನಾನ ಮಾಡಿ ಆ ಬಟ್ಟೆಗಳನ್ನು ಹಿಂಡಿ ಹರವಿ ತುಸು ಹರಟೆ ಹೊಡೆದು ಒಣಗಿದ ಬಟ್ಟೆಗಳನ್ನು ಮಡಚಿ ಗಂಟು ಕಟ್ಟಿಕೊಂಡು ಮನೆಗೆ ಬರುತ್ತಿದ್ದರು.

ಸಿಹಿ ನೀರಿನ ಬಾವಿಯಿಂದ ಕುಡಿಯುವ ನೀರು ಹೊತ್ತು ತರುತ್ತಿದ್ದ ಅವರು ಅವಶ್ಯಕತೆ ಇದ್ದಷ್ಟೇ ನೀರನ್ನು ಬಳಸುತ್ತಿದ್ದರು.

ಪ್ರಸ್ತುತ ದಿನಮಾನಗಳಲ್ಲಿ ಬಟನ್ ಹಾಕಿದರೆ ಮನೆಯ ಅಂಡರ್ ಗ್ರೌಂಡ್ನಲ್ಲಿ ಶೇಖರಿಸಿ ಇಟ್ಟಿರುವ ನೀರು ಮನೆಯ ಮೇಲ್ಭಾಗದ ನೀರಿನ ತೊಟ್ಟಿಗೆ ತಲುಪುತ್ತದೆ. ನಲ್ಲಿಯನ್ನು ತಿರುಗಿಸಿಟ್ಟರೆ ನೀರು ಒಂದೇ ಸಮ ಹರಿಯ ತೊಡಗುತ್ತದೆ ಅದೆಷ್ಟು ಬಳಸಿದ್ದೇವೆ ಎಂದು ಗೊತ್ತಾಗದೆ ನೀರನ್ನು ಬಳಸುವ ಜನರು ನಮ್ಮಲ್ಲಿದ್ದಾರೆ. ಟಾಯ್ಲೆಟ್ ನ ಫಸ್ಟ್ ಟ್ಯಾಂಕ್ ಮತ್ತು ವಾಷಿಂಗ್ ಮಷೀನ್ಗಳಿಗೆ ತುಸು ಹೆಚ್ಚೆ ನೀರು ಬೇಕಾಗುತ್ತದೆ. ಇನ್ನು ದೊಡ್ಡ ದೊಡ್ಡ ನಗರಗಳಲ್ಲಿ ಇರುವ ಅಪಾರ್ಟ್ಮೆಂಟ್ ಗಳಲ್ಲಿ ಪೂರ್ಣ ದೊಡ್ಡದಾದ ನೀರಿನ ಟ್ಯಾಂಕ್ಗಳಲ್ಲಿ ನೀರು ಶೇಖರಿಸಲ್ಪಟ್ಟಿದ್ದು ಯಾರಿಗೂ ಇಷ್ಟೆ ಬಳಸಬೇಕು ಎಂಬ ನಿಯಮಗಳು ಇಲ್ಲದೆ ಇರುವುದರಿಂದ ಅಲ್ಲಿ ಕೂಡ ನೀರಿನ ದುರ್ಬಳಕೆಯಾಗುತ್ತದೆ. ಶವರ್ ಗಳಲ್ಲಿ ಸ್ನಾನ ಮಾಡುವ ಜನರು ಕೂಡ ನೀರನ್ನು ಅತಿಯಾಗಿ ಬಳಸುತ್ತಾರೆ. ಕೆಲವೆಡೆ ಕುಡಿಯಲು ನೀರಿಲ್ಲದೇ ಇದ್ದರೂ ಕಾರುಗಳನ್ನು, ಬೈಕುಗಳನ್ನು ತೊಳೆಯಲು ಪೈಪ್ ಮೂಲಕ ನೀರನ್ನು ಹಾಯಿಸುತ್ತಾರೆ ಇಲ್ಲಿಯೂ ಕೂಡ ಉಗುರಿಗೆ ಹೋಗುವುದಕ್ಕೆ ಕೊಡಲಿ ತೆಗೆದುಕೊಂಡಂತೆ ನೀರಿನ ಪೋಲಾಗುವುದು.

ಅರಣ್ಯಗಳ ಒತ್ತುವರಿ, ಕಾಡನ್ನು ಕಡಿದು ಕಾಂಕ್ರೀಟ್ ನಾಡನ್ನಾಗಿ ಮಾಡುತ್ತಿರುವುದು, ಅವೈಜ್ಞಾನಿಕವಾಗಿ ರಸ್ತೆಗಳನ್ನು ಅಗಲೀಕರಣ ಮಾಡುವಾಗ ಗಿಡಮರಗಳನ್ನು ಬೇಕಾಬಿಟ್ಟಿಯಾಗಿ ತರಿದು ಚೆಲ್ಲುತ್ತಿರುವುದು, ನೀರು ಹರಿದು ಹೋಗಲು ಅನುವಾಗುವಂತೆ ಮಾಡದೆ ನೆಲಕ್ಕೆಲ್ಲ ಸಿಮೆಂಟಿನ ನೆಲಹಾಸನ್ನು ಹಾಸಿ ನೀರನ್ನು ಇಂಗಿಸದೆ ಇರುವುದು.. ಹೀಗೆ ಹತ್ತು ಹಲವು ರೀತಿಗಳಲ್ಲಿ ನೀರಿನ ದುರ್ಬಳಕೆಯಾಗುತ್ತಿದ್ದು ಇವೆಲ್ಲದರ



ಪರಿಣಾಮವಾಗಿ ಅಂತರ್ಜಲ ಮಟ್ಟ ಕುಸಿದಿದೆ. ಬೇಸಿಗೆಯಿನ್ನೂ ದೂರ ಮಳೆಗಾಲ ಮುಗಿಯುವುದರಲ್ಲಿ ಕೆರೆಕಟ್ಟೆಗಳು ಕೂಡ ಬರಿದಾಗುತ್ತಿವೆ. ಗಿಡಮರಗಳ ಸಾಂದ್ರತೆ ಕಡಿಮೆಯಾಗಿರುವುದ-ರಿಂದ ಮಳೆಯ ಪ್ರಮಾಣ ಕೂಡ ಕಡಿಮೆಯಾಗಿದೆ. ಇದರ ಪರಿಣಾಮವಾಗಿ ಭೂಮಿಯ ತಾಪಮಾನ ಹೆಚ್ಚುತ್ತಿದ್ದು ಇದು ಹೀಗೆಯೇ ಮುಂದುವರೆದರೆ ಮುಂದಿನ ಕೆಲವೇ ವರ್ಷಗಳಲ್ಲಿ

ಭೂಮಿಯ ಮೇಲೆ ಮನುಷ್ಯ ಬದುಕುವುದು ದುರ್ಬರ ಎನಿಸುವಷ್ಟು ಉಷ್ಣತೆ ನಮ್ಮನ್ನು ಕಾಡುತ್ತದೆ. ಈಗಾಗಲೇ ಹಲವಾರು ಸಸ್ಯ ಪ್ರಭೇದಗಳು ಪ್ರಾಣಿ ಸಂಕುಲಗಳು ನಾಶವಾಗಿದ್ದು ಮತ್ತೆ ಕೆಲವು ವಿನಾಶದ ಅಂಚಿನಲ್ಲಿವೆ.

ಇದೆಲ್ಲವನ್ನು ಮನಗಂಡು ನಾವು ನಮ್ಮ ಮುಂದಿನ ಪೀಳಿಗೆಯ ಉಳಿವಿಗಾಗಿ ಜಲ ಸಂರಕ್ಷಣೆಯನ್ನು ಮಾಡಲೇಬೇಕಾಗಿದೆ. ನೀರಿನ ದುರುಪಯೋಗದ ಕುರಿತು ಮಕ್ಕಳಿಗೆ ಅರಿವು ಮೂಡಿಸಬೇಕು. ಎಲ್ಲೆಲ್ಲಿ ನಾವು ನೀರಿನ ದುರ್ಬಳಕೆಯನ್ನು ತಪ್ಪಿಸಬಹುದು ಎಂಬುದನ್ನು ಅರಿತು ಅಂತೆಯೇ ಕಾರ್ಯನಿರ್ವಹಿಸಲು



ಮಕ್ಕಳನ್ನು ಸೇರಿದಂತೆ ನಾವು ಕೂಡ ಯುದ್ಧೋಪಾದಿಯಲ್ಲಿ ಜಲ ಮೂಲಗಳನ್ನು ಸಂರಕ್ಷಿಸಬೇಕು. ನಮ್ಮ ಮುಂದಿನ ಜನಾಂಗದ ಉಳಿವಿಗಾಗಿ ನೀರನ್ನು ಸಂರಕ್ಷಿಸುವುದು ನಮ್ಮ ಆಧ್ಯ ಕರ್ತವ್ಯ ಎಂಬುದನ್ನು ಅರಿತು ನಾವು ಕಾರ್ಯ ನಿರ್ವಹಿಸಲೇಬೇಕು.



ವೀಣಾ ಹೇಮಂತಗೌಡ ಪಾಟೀಲ್.
ಮುಂಡರಗಿ - ಗದಗ

ಸಿಮೆಂಟ್ ಮಿಕ್ಸರ್ ಟ್ಯಾಂಕರ್ ಡಿಕ್ಕಿ; ಇಬ್ಬರು ಚಾಲಕರ ಸ್ಥಿತಿ ಗಂಭೀರ



ಸೇಡಂ: ಈರುಳ್ಳಿ ತುಂಬಿಕೊಂಡು ಸಾಗುತ್ತಿದ್ದ ಟ್ರಕ್ ಹಾಗೂ ಸಿಮೆಂಟ್ ಮಿಕ್ಸರ್ ಟ್ಯಾಂಕರ್ ನಡುವೆ ಭೀಕರ ಮುಖಾಮುಖಿ ಅಪಘಾತ ಸಂಭವಿಸಿದ್ದು, ಇಬ್ಬರು ವಾಹನಗಳ ಚಾಲಕರು ಗಂಭೀರವಾಗಿ ಗಾಯಗೊಂಡಿರುವ ಘಟನೆ ತಾಲೂಕಿನ ಬೀರನಳ್ಳಿ ಕ್ರಾಸ್ ಬಳಿ ನಿನ್ನೆ ರಾತ್ರಿ ನಡೆದಿದೆ. ಡಿಕ್ಕಿಯ ರಭಸಕ್ಕೆ ಎರಡೂ ವಾಹನಗಳ ಮುಂಭಾಗ ಸಂಪೂರ್ಣ ಜಖಂಗೊಂಡಿದ್ದು, ಟ್ರಕ್ನಲ್ಲಿದ್ದ ಈರುಳ್ಳಿ ರಸ್ತೆಯುದ್ದಕ್ಕೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡ ಇಬ್ಬರು ಚಾಲಕರನ್ನು ಸಾರ್ವಜನಿಕರ ಸಹಕಾರದೊಂದಿಗೆ ತಕ್ಷಣವೇ ಕಲಬುರಗಿ ಜಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ ಎಂದು ಸ್ಥಳೀಯ ಪೊಲೀಸ್ ಠಾಣೆಯ ಸಿಬ್ಬಂದಿಗಳು ಸಂಜೆವಾಣಿಗೆ ಮಾಹಿತಿ ನೀಡಿದ್ದಾರೆ. ಅಪಘಾತದಿಂದ ಕಲಬುರಗಿ ಸೇಡಂ ಹೆದ್ದಾರಿಯಲ್ಲಿ ಭಾರೀ ಟ್ರಾಫಿಕ್ ಜಾಮ್ ಉಂಟಾಗಿದೆ ರಿಂದ ವಾಹನ ಸವಾರರು ಪರದಾಡುವ ಪರಿಸ್ಥಿತಿಯನ್ನು ಕಂಡು ಮಳಖೇಡ ಪೊಲೀಸ್ ಠಾಣೆ ಸಿಬ್ಬಂದಿ ವರ್ಗದವರು ತಕ್ಷಣ ರಸ್ತೆ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಹೊನ್ನಿಕೇರಿಯಲ್ಲಿ ಶ್ರದ್ಧೆ, ಭಕ್ತಿಯ ದೀಪೋತ್ಸವ



ಬೀದರ್: ದೀಪಾವಳಿ ಪಾಡ್ಯದ ನಿಮಿತ್ತ ತಾಲ್ಲೂಕಿನ ಹೊನ್ನಿಕೇರಿ ಗ್ರಾಮದ ಸಿದ್ಧೇಶ್ವರ ದೇವಸ್ಥಾನದಲ್ಲಿ ಮಂಗಳವಾರ ಶ್ರದ್ಧೆ, ಭಕ್ತಿಯಿಂದ ದೀಪೋತ್ಸವ ನಡೆಯಿತು.

ಭಕ್ತರು ದೇವಸ್ಥಾನದ ಹಳೆಯ ಪೀಠಾಧಿಕಾರಿ ಮನೆಯಿಂದ ದೇವಸ್ಥಾನಕ್ಕೆ ಆಗಮಿಸಿ, ಪುಷ್ಕರಣಿ, ಲಿಂಗ ಮಂದಿರ, ಮಾಲಗಂಬ, ಪ್ರತಿ ಮೆಟ್ಟಿಲುಗಳ ಮೇಲೆ ಹಣತೆ ಇಟ್ಟು, ಅದರಲ್ಲಿ ಎಣ್ಣೆ ಹಾಕಿ ದೀಪ ಬೆಳಗಿಸಿದರು.

ಸಿದ್ಧೇಶ್ವರ ಹಾಗೂ ಮಲ್ಲಿಕಾರ್ಜುನ ದೇವರಿಗೆ ಪೂಜೆ ಸಲ್ಲಿಸಿ, ನೈವೇದ್ಯ ಸಮರ್ಪಿಸಿದರು.

ಪ್ರತಿ ವರ್ಷ ದೀಪಾವಳಿ ಪಾಡ್ಯದ ಅಂಗವಾಗಿ ದೀಪೋತ್ಸವ ನಡೆಸಿಕೊಂಡು ಬರಲಾಗುತ್ತಿದೆ. ದೇವಸ್ಥಾನದ ಪೀಠಾಧಿಕಾರಿಯಾಗಿದ್ದ ಸಿದ್ಧಲಿಂಗಯ್ಯ ಸ್ವಾಮಿ ಪೂಜಾರಿ ಅವರ ನಿಧನದ ನಂತರ ಅವರ ಕಿರಿಯ ಪುತ್ರ ನಾಗಯ್ಯ ಸ್ವಾಮಿ ಪೂಜಾರಿ ಅವರು ದೀಪೋತ್ಸವ ಮುನ್ನಡೆಸುತ್ತಿದ್ದಾರೆ ಎಂದು ಲಿಂಗರಾಜ ಸ್ವಾಮಿ ಪೂಜಾರಿ ತಿಳಿಸಿದರು.

ಪ್ರಧಾನಅರ್ಚಕಸಿದ್ಧಯ್ಯಸ್ವಾಮಿ,ಪ್ರಮುಖರಾದ ಗದಗಯ್ಯ ಸ್ವಾಮಿ, ರಾಮಯ್ಯ, ಬಾಬಯ್ಯ, ಪ್ರಶಾಂತಯ್ಯ, ಗುರುಶಾಂತಯ್ಯ, ಶ್ರೀಕಾಂತಯ್ಯ, ವಿಶ್ವನಾಥ, ಆಕಾಶ, ಸುದೀಪ್, ಸಂದೀಪ್, ಶಿವಪುತ್ರ, ವಿಷ್ಣು ರೆಡ್ಡಿ, ಗಣೇಶ ಹೂಗಾರ್, ಗ್ರಾಮಸ್ಥರು ಹಾಗೂ ಭಕ್ತರು ದೀಪೋತ್ಸವದಲ್ಲಿ ಪಾಲ್ಗೊಂಡರು.

ಯುವಜನರಲ್ಲಿ ಪುಸ್ತಕ ಓದುವ ಆಸಕ್ತಿ ಬೆಳೆಸಲು ವಿಶೇಷ ಅಭಿಯಾನ

ಅಫಜಲಪುರ: ಮೊಬೈಲ್ ಮತ್ತು ಸಾಮಾಜಿ-ಕ ಜಾಲತಾಣಗಳ ಪ್ರಭಾವದ ನಡುವೆ ಯುವಜನರು ಹಾಗೂ ವಿದ್ಯಾರ್ಥಿಗಳಲ್ಲಿ ಪುಸ್ತಕ ಓದುವ ಹವ್ಯಾಸ ಬೆಳೆಸುವುದು ಇಂದಿನ ಅಗತ್ಯವಾಗಿದೆ. ಪುಸ್ತಕಗಳ ಅಧ್ಯಯನದಿಂದ ಜ್ಞಾನ, ಚಿಂತನಾ ಶಕ್ತಿ ಮತ್ತು ವ್ಯಕ್ತಿತ್ವ ವಿಕಸನ ಸಾಧ್ಯವಾಗುತ್ತದೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ರಾಜ್ಯ ಸದಸ್ಯ ಬಿ.ಎಚ್. ನಿರಗುಡಿ ಹೇಳಿದರು.

ಭಾಷೆಗಳನ್ನುಕಲಿಯಿರಿ

ಪಟ್ಟಣದ ಮಳೇಂದ್ರ ಮಠದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಹಾಗೂ ಜಿಲ್ಲಾ ಜಾಗೃತ ಸಮಿತಿ ಕಲಬುರಗಿ ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಮನೆಗೊಂದು ಗ್ರಂಥಾಲಯ' ಅನುಷ್ಠಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯಾರು ಪುಸ್ತಕಗಳನ್ನು ಆಳವಾಗಿ ಅಧ್ಯಯನ ಮಾಡಿ ಜ್ಞಾನ ಸಂಪಾದಿಸುತ್ತಾರೋ ಅವರು ಜೀವನದಲ್ಲಿ ಉನ್ನತ ಸಾಧನೆ ಮಾಡಲು ಸಾಧ್ಯ. ಈ ನಿಟ್ಟಿನಲ್ಲಿ ಪುಸ್ತಕ ಪ್ರಾಧಿಕಾರವು ಓದುವ ಸಂಸ್ಕೃತಿಯನ್ನು ಜನಸಾಮಾನ್ಯ-ರಿಗೆ ತಲುಪಿಸಲು ವಿವಿಧ ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗಾಗಿ ನನ್ನ ನೆಚ್ಚಿನ ಪುಸ್ತಕ, ರಸಪ್ರಶ್ನೆ, ಪ್ರಬಂಧ ಸ್ಪರ್ಧೆ ಸೇರಿದಂತೆ ಪುಸ್ತಕ ಪ್ರದರ್ಶನ, ವಿಚಾರ ಸಂಕಿರಣ ಹಾಗೂ ತಿಂಗಳ ಪುಸ್ತಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು ಮಾತನಾಡಿ, ಪುಸ್ತಕಗಳನ್ನು ಓದುವ



ಮೂಲಕ ಜ್ಞಾನವನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಬದುಕು ಉಜ್ವಲವಾಗುತ್ತದೆ. ಪ್ರತಿಯೊಬ್ಬರೂ ಮನೆಯಲ್ಲಿ ಪುಸ್ತಕಗಳನ್ನು ಸಂಗ್ರಹಿಸುವುದರ ಜೊತೆಗೆ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಬಸಣ್ಣ ಗುಣಾರಿ, ಮುರುಗೇಂದ್ರ ಮಸಳಿ, ಬಸವರಾಜ ಕಲಶೆಟ್ಟಿ, ಅಬ್ಬಾಸಲಿ ನದಾಫ್, ಬಿ.ಎಂ. ರಾವ್, ಬಸವರಾಜ ನಿಂಬರ್ಗಿ, ರೇವಣಸಿದ್ದಯ್ಯ ಹಿರೇಮಠ ಹಾಗೂ ರೇವಣಸಿದ್ದಪ್ಪ ದುಕಾನ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ತಮ್ಮ ಮನೆಯಲ್ಲಿ ಪುಸ್ತಕಗಳ ಸಂಗ್ರಹ ಹೊಂದಿ ಓದುವ ಹವ್ಯಾಸ ಬೆಳೆಸಿಕೊಂಡಿರುವುದು ಸಂತಸದ ಸಂಗತಿ. ಮನೆಗೊಂದು ಗ್ರಂಥಾಲಯ ಅಭಿಯಾನವು ಪ್ರತಿಯೊಬ್ಬರಲ್ಲೂ ಓದುವ ಆಸಕ್ತಿ ಮೂಡಿಸುವಲ್ಲಿ ಸಹಕಾರಿಯಾಗಲಿದೆ. ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಪಾಲಕರು ಓದಿನ ಕಡೆಗೆ ಹೆಚ್ಚು ಗಮನ ಕೊಡಿಸುವ ಕೆಲಸ ಮಾಡಬೇಕು. ಮೊಬೈಲ್ ಫೋನಳಿಂದ ದೂರವಿಡುವ ಕೆಲಸವನ್ನು ಪಾಲಕರು ಮಾಡಬೇಕು.

ಗೌರಿ ಸಕ್ಕರೆ ಕಾರ್ಖಾನೆ: ಬಾಯ್ಲರ್ ಅಗ್ನಿ ಪ್ರದೀಪನಾ ಪೂಜೆ

ಬೀದರ್: ಭಾಲ್ಕಿ ತಾಲ್ಲೂಕಿನ ಬಾಜೋಳಗಾದ ಓಂಕಾರ ಗ್ರೂಪ್‌ನ ಗೌರಿ ಶುಗರ್ ಆಯಿಂಡ್ ಡಿಸ್ಟಲರೀಸ್ ಪ್ರೈವೇಟ್ ಲಿಮಿಟೆಡ್(ಘಟಕ ಸಂಖ್ಯೆ 13) ನಲ್ಲಿ ಬಾಯ್ಲರ್ ಅಗ್ನಿ ಪ್ರದೀಪನಾ ಪೂಜೆ ಹಾಗೂ ಕಬ್ಬು ನುರಿಕೆಗೆ ಚಾಲನೆ ಕಾರ್ಯಕ್ರಮ ನಡೆಯಿತು.

ಓಂಕಾರ ಗ್ರೂಪ್ ಅಧ್ಯಕ್ಷ ಬಾಬುರಾವ್ ಬೋತ್ರೆ ಪಾಟೀಲ ಹಾಗೂ ಮಾಜಿ ಶಾಸಕ ಪ್ರಕಾಶ ಖಂಡ್ರೆ ಅವರು ಬಾಯ್ಲರ್ ಪೂಜೆ ನೆರವೇರಿಸಿದರು. ಇದೇ ವೇಳೆ ಯಂತ್ರಕ್ಕೆ ಕಬ್ಬು ಹಾಕಿ, ಪ್ರಸಕ್ತ ಹಂಗಾಮಿನ ಕಬ್ಬು ನುರಿಕೆಗೆ ಚಾಲನೆ ಕೊಡಲಾಯಿತು.

ಪ್ರಸಕ್ತ ಹಂಗಾಮಿನಲ್ಲಿ ಕಾರ್ಖಾನೆಯು ಪ್ರತಿ ಟನ್ ಕಬ್ಬಿಗೆ ಜಿಲ್ಲೆಯ ಇತರೆ ಕಾರ್ಖಾನೆಗಳಿಗಿಂತ ರೈತರಿಗೆ ಹೆಚ್ಚು ಬೆಲೆ ಕೊಡಲಿದೆ. ಕಬ್ಬು ಪೂರೈಸಿದ 8 ದಿನಗಳ ಒಳಗೆ ಬಿಲ್ ಪಾವತಿ ಮಾಡಲಿದೆ ಎಂದು ಬಾಬುರಾವ್ ಬೋತ್ರೆ ಪಾಟೀಲ ತಿಳಿಸಿದರು. ಕಾರ್ಖಾನೆಗೆ 2025-26ನೇ ಹಂಗಾಮಿನಲ್ಲಿ ಕಬ್ಬು ಪೂರೈಸಿದ ರೈತರಿಗೆ ಪ್ರತಿ ಟನ್‌ಗೆ ತಲಾ ರೂ. 100 ಹೆಚ್ಚುವರಿ ಹಣ ಎರಡು ದಿನಗಳಲ್ಲಿ ಪಾವತಿಸಲಾಗುವುದು ಎಂದು ಹೇಳಿದರು.

ಪ್ರಸಕ್ತ ಹಂಗಾಮಿಗೆ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುವ ರೈತರಿಗೆ ಉಚಿತ ಸಕ್ಕರೆ ಹಾಗೂ ಕಾರ್ಖಾನೆಯ



ನೌಕರರಿಗೆ ತಲಾ 10 ಕೆ.ಜಿ. ಉಚಿತ ಸಕ್ಕರೆ ಕೊಡಲಾಗುವುದು ಎಂದು ಘೋಷಿಸಿದರು.

ರೈತರು ಕಾರ್ಖಾನೆಗೆ ಕಬ್ಬು ಸಾಗಿಸಿ, ಸಹಕರಿಸಬೇಕು ಎಂದು ಮನವಿ ಮಾಡಿದರು.

ಹುಲಸೂರಿನ ಶಿವಾನಂದ ಸ್ವಾಮೀಜಿ, ಮಹಾದೇವ ದೇವರು, ಮಾಜಿ ಸಚಿವ ಸಂಭಾಜಿರಾವ್ ಪಾಟೀಲ, ಓಂಕಾರ ಗ್ರೂಪ್ ಸಿಇಒ ತೇಜಸ್ವಿನಿ ಬರ್ಗೆ, ರೈತ ಸಂಘದ ಜಿಲ್ಲಾ ಅಧ್ಯಕ್ಷ ಸಿದ್ರಾಮಪ್ಪ ಆಣದೂರೆ, ಕಾರ್ಖಾನೆಯ ಪ್ರಧಾನ ವ್ಯವಸ್ಥಾಪಕ ಮಹಾವೀರ ಘೋಡ್ಕೆ, ಕಬ್ಬು ಪ್ರಧಾನ ವ್ಯವಸ್ಥಾಪಕ ಕಾಶಿನಾಥ ಕಾಡಾದಿ, ಮುಖ್ಯ ಎಂಜಿನಿಯರ್ ಅವಿನಾಶ ಬಿರಾದಾರ, ಪ್ರೊಸೆಸ್ ಮುಖ್ಯಸ್ಥ ಸುಭಾಷ್ ಬಿರಾದಾರ, ಎಲೆಕ್ಟ್ರಿಕಲ್ ಡಿಜಿಎಂ ರವಿಶಂಕರ, ಬಾಯ್ಲರ್ ಪ್ರಧಾನ ವ್ಯವಸ್ಥಾಪಕ ಉಲ್ಲಾಸ್ ಭೋಸ್ಲೆ, ಡಿಸ್ಟಲರಿ ವ್ಯವಸ್ಥಾಪಕರಾದ ಕೃಷ್ಣ ಶೇಳಕೆ, ನವನಾಥ ಪವಾರ್, ಮಾನವ ಸಂಪನ್ಮೂಲ ವ್ಯವಸ್ಥಾಪಕ ವೀರೇಶ ಎಸ್. ಹಲಿಂಗೆ, ಮುಖ್ಯ ಲೆಕ್ಕಾಧಿಕಾರಿ ಸಚಿನ್ ಕಾಸೆಕರ್, ರೈತ ಸಂಘ ಪ್ರತಿನಿಧಿಗಳು, ಕಾರ್ಖಾನೆಯ ಎಲ್ಲ ಅಧಿಕಾರಿಗಳು ಹಾಗೂ ಕಾರ್ಮಿಕರು ಹಾಜರಿದ್ದರು.

ಚಳಕಾಪುರ ಗ್ರಾಮದಲ್ಲಿ ಹನುಮಾನ ದೇವರ ಜಾತ್ರೆ

ಭಾಲ್ಕಿ : ತಾಲ್ಲೂಕಿನ ಚಳಕಾಪೂರ ಗ್ರಾಮದಲ್ಲಿ ಹನುಮಾನ ದೇವರ ಜಾತ್ರಾಮಹೋತ್ಸವ ನಿಮಿತ್ತ ಆಯೋಜಿಸಿದ್ದ ಧ್ವಜಾರೋಹಣವನ್ನು ಸಂಸದ ಸಾಗರ್ ಖಂಡ್ರೆ ನೆರವೇರಿಸಿದರು. ಪಲ್ಲಕ್ಕಿ ಮೆರವಣಿಗೆ ದೇವಸ್ಥಾನದಿಂದ ಆರಂಭಗೊಂಡು ಗ್ರಾಮದ ಪ್ರಮುಖ ಬೀದಿಗಳಲ್ಲಿಸಂಚರಿಸಿ ಪುನಃ ದೇವಸ್ಥಾನಕ್ಕೆ ತಲುಪಿತು. ಆನೆ ಪಲ್ಲಕ್ಕಿ ಮೆರವಣಿಗೆಯ ಪ್ರಮುಖಆಕರ್ಷಣೆಯಾಗಿತ್ತು.

ರಾಜ್ಯದ ವಿವಿಧ ಜಿಲ್ಲೆಗಳು ಸೇ-ರಿದಂತೆ ನೆರೆಯ ತೆಲಂಗಾಣ, ಮಹಾರಾಷ್ಟ್ರ,ಆಂಧ್ರಪ್ರದೇಶದಿಂದ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದ ಭಕ್ತರು ಪಲ್ಲಕ್ಕಿಮೆರವಣಿಗೆಯಲ್ಲಿ ಸಡಗರದಿಂದ ಪಾಲ್ಗೊಂಡು ಹನುಮಾನ ದೇವರ ಕೃಪೆಗೆ ಪಾತ್ರರಾದರು.

ಇದಕ್ಕೂ ಮುನ್ನ ಜರುಗಿದ ವಿಶೇಷ ಪೂಜಾ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಂಸದ ಸಾಗರ್ ಖಂಡ್ರೆ, ವಿಧಾನಪ-ರಿಷತ್ ಸದಸ್ಯ ಮಾರುತಿರಾವ್ ಮೂಳೆ ಪಾಲ್ಗೊಂಡಿದ್ದರು.



ಪ್ರತಿ ಎಕರೆಗೆ 5 ಸಾವಿರ ರೂ. ಪರಿಹಾರ ನೀಡಿ



ಜೇವರಗಿ: ಬರದಿಂದ ತತ್ತರಿಸಿದ ಜೇವರ್ಗಿ ತಾಲೂಕು ರೈತರ ಪ್ರತಿ ಎಕರೆಗೆ 5000 ನೀಡಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಅಧ್ಯಕ್ಷ ಸುಭಾಸ ಹೊಸಮನಿ ಹೇಳಿದರು. ತಾಲೂಕಿನ

ಕೋಳಕೂರ ಗ್ರಾಮದಲ್ಲಿ ಬಹಿರಂಗ ಭಾಷಣ ಮಾಡುತ್ತಾ ಅವರು ಈ ವರ್ಷ ಅತ್ಯಂತ ಕೆಟ್ಟ ಬರಗಾಲದ ಪರಸ್ಥಿತಿ ನಿರ್ಮಾಣವಾಗಿದೆ ಬದುಕು ನಡೆಸುವುದಕ್ಕಾಗಿ ದೊಡ್ಡ ನಗರಗಳ ಪ್ರದೇಶಗಳಿಗೆ ಬಾಂಬೆ ಬೆಂಗಳೂರು ಹೈದರಾಬಾದ್ ಇನ್ನಿತರ ದೊಡ್ಡ ಪ್ರದೇಶದ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ.

ಇದರಿಂದ ಬಡ ಜನರ ಮೇಲೆ ಕೆಟ್ಟ ಪರಿಣಾಮ ಬೀರಲಿದೆ, ಸಣ್ಣ ಪುಟ್ಟ ಆಸ್ತಿಗಳು ಹಾಗೂ ದನ ಕರುಗಳು ಮಕ್ಕಳ ವಿದ್ಯಾಭ್ಯಾಸ ಹಾಳಾಗಿ ಹೋಗುತ್ತಿದೆ.ಆದ್ದರಿಂದ ಸಾರ್ವಜನಿಕರ ಬಡ ರೈತರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಬರಗಾಲ ಕಾಮಗಾರಿ ಪ್ರಾರಂಭ ಮಾಡಬೇಕು ಅಕ್ಕಿ ಗೋದಿ ಜೋಳ ಇನ್ನಿತರ ದವಸಧಾನಗಳನ್ನು ವಿತರಿಸಬೇಕು ದನ ಕರುಗಳಿಗೆ ಗೋಶಾಲೆ ತೆರೆಯಬೇಕು.ಉದ್ಯೋಗ ಖಾತ್ರಿಯ ಕಾಮಗಾರಿಯನ್ನು ಕೆಲಸವನ್ನು ಈಗ ನಿಗದಿಪಡಿಸಿರುವ 125 ದಿನಗಳನ್ನು 200 ದಿನಗಳಿಗೆ ಹೆಚ್ಚಳ ಮಾಡಬೇಕು ಎಂದು ಆಗ್ರಹಿಸಿದರು.

ಸಿದ್ದಣ್ಣ ಹಂಗರಗಿ ಸಿದ್ದು ಕೋಳ್ ಕೋರ್ ಮಾನಂದ ಮಲ್ಕಪ್ಪ ಹರನೂರ್ ಶ್ರೀಕಾಂತ ದಾಸರ ಇನ್ನೂ ಹಲವಾರು ಮಹಿಳೆಯರು ಪುರುಷರು ಭಾಗವಹಿಸಿದರು

ಅಪರಾದಕ್ಕಿಂತ ಮುಂಚೆ ಕಾನೂನು ಜಾಗೃತಿ ಅವಶ್ಯಕ: ಹಣಮಂತರಾಯ ಅಟ್ಟೂರ



ಕಲಬುರಗಿ:ವಿದ್ಯಾರ್ಥಿಗಳು ದೇಶದ ಆಸ್ತಿ ಮಾತ್ರವಲ್ಲ, ರಾಷ್ಟ್ರದ ಭವಿಷ್ಯ ನಿರ್ಮಾಪಕರು ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಪ್ಯಾನಲ್ ವಕೀಲರಾದ ಹಣಮಂತರಾಯ ಅಟ್ಟೂರ ಹೇಳಿದರು.

ಕಲಬುರಗಿ ತಾಲ್ಲೂಕಿನ ಹರಸೂರ ಗ್ರಾಮದ ಶ್ರೀ ಕರಿಬಸವೇಶ್ವರ ಶಾಲೆಯಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಮ್ಮಿಕೊಂಡಿರುವ ಲೈಂಗಿಕ ಅಪರಾಧಗಳಿಂದ ಮಕ್ಕಳ ಸುರಕ್ಷತೆ ಕಾಯ್ದೆ 2012 (ಪೋಕ್ಸೋ) ಕಾಯ್ದೆ ಕುರಿತು ಮಾತನಾಡುತ್ತ ಇಂದಿನ ದಿನಗಳಲ್ಲಿ ಅತಿ ಆಸೆ, ತಾತ್ಕಾಲಿಕ ಸುಖದ ಬೆನ್ನು ಹತ್ತಿ, ಕಾನೂನು ತಿಳುವಳಿಕೆ ಇಲ್ಲದೆ ವಿದ್ಯಾರ್ಥಿ, ಯುವಕರು ತಮ್ಮ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಅದಕ್ಕಾಗಿ ಪಾಲಕರು, ಶಿಕ್ಷಕರು ಸರ್ವರೂ ಮಕ್ಕಳಿಗೆ ಭಯ ನೀಡದೆ, ಭರವಸೆ ನೀಡಬೇಕು. ಮೌನವಲ್ಲದೆ,ಧೈರ್ಯ, ತಿಳುವಳಿಕೆ ಕಲಿಸಬೇಕು. ಸುರಕ್ಷಿತ ಬಾಲ್ಯವನ್ನು ನಿರ್ಮಿಸುವ ಕಾರ್ಯ ಮಾಡಬೇಕು.ಮಕ್ಕಳ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ.ಕಾನೂನು ಅಪರಾಧ ನಡೆದ ನಂತರ ಶಿಕ್ಷೆ ನೀಡಬಹುದು. ಆದರೆ ಜಾಗೃತಿ ಮೂಡಿಸುವ ಮೂಲಕ ಅಪರಾಧ ನಡೆಯದಂತೆ ತಡೆಯುವುದು ನಮ್ಮೆಲ್ಲರ ಕೈಯಲ್ಲಿದೆ ಎಂದು ಮಾರ್ಮಿಕವಾಗಿ ನುಡಿದರು.

ನಂತರ ಎಲ್ಲಾ ವಿದ್ಯಾರ್ಥಿಗಳಿಂದ ನಮ್ಮ ಹಕ್ಕನ್ನು ಅರಿತು, ಪರರ ಹಕ್ಕು ಕಸಿದುಕೊಳ್ಳದೆ, ಯಾವುದೇ ಅಫರಾಧ ಮಾಡದೇ ಕಾನೂನು ಚೌಕಟ್ಟಿನಲ್ಲಿಯೇ ಜೀವನ ಸಾಗಿಸುತ್ತೇವೆ ಎಂದು ಪ್ರತಿಜ್ಞೆ ಭೋದಿಸಲಾಯಿತು. ಕಾರ್ಯಕ್ರಮದಲ್ಲಿ ಶಿಕ್ಷಕರಾದ ಸರೋಜಿನಿ,ಲಕ್ಷ್ಮೀ, ಅಂಬಿಕಾ, ಪ್ರೀಯಾ,

ಕನ್ನಡಿಗರ ಸ್ವಾಭಿಮಾನ ಬಡಿದೆಬ್ಬಿಸಿದ ಮಹಾಕವಿ ಕುವೆಂಪು




ಕಲಬುರಗಿ: ರಾಷ್ಟ್ರಕವಿ ಕುವೆಂಪು ಅವರು ಪ್ರತಿಯೊಬ್ಬರಲ್ಲಿಯೂ ಕನ್ನಡ ನಾಡು, ನುಡಿ, ಭಾಷೆ, ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅರಿವು ಮೂಡುವಂತೆ ತಮ್ಮದೇ ಆದ ಅನೇಕ ಮೌಲ್ಯಯುತ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಕನ್ನಡಿಗರ ಸ್ವಾಭಿಮಾನವನ್ನು ಬಡಿದೆಬ್ಬಿಸಿದ ಮಹಾಕವಿ ಹಾಗೂ ಮಾನವೀಯ ಮೌಲ್ಯಗಳ ಮಹಾನ ಚೇತನವಾಗಿದ್ದಾರೆ ಎಂದು ಉಪನ್ಯಾಸಕ, ಲೇಖಕ ಎಚ್.ಬಿ.ಪಾಟೀಲ್ ಹೇಳಿದರು.

ನಗರದ ಆಳಂದ ರಸ್ತೆಯ ಖಾದ್ರಿ ಚೌಕನಲ್ಲಿನ 'ಸಕ್ಸಸ್ ಕಂಪ್ಯೂಟರ ತರಬೇತಿ ಕೇಂದ್ರ'ದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ 'ರಾಷ್ಟ್ರಕವಿ ಕುವೆಂಪುರವರ 32ನೇ ಪುಣ್ಯಸ್ಮರಣೆ'ಯ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಮಾನವ ಹುಟ್ಟುತ್ತಾ ವಿಶ್ವಾನಾವನಾಗಿ ಹುಟ್ಟುತ್ತಾನೆ. ಬೆಳೆಯುತ್ತಲೇ ಆತ ಜಾತಿ, ಧರ್ಮಗಳು,ಮೌಢ್ಯತೆಯಂತಹಸಂಕೋಲೆಗಳಲ್ಲಿ ಸಿಲುಕಿ ಅಲ್ಪಮಾನವನಾಗುತ್ತಾನೆ. ಆತನಿಗೆ ಶಿಕ್ಷಣ, ಮೌಲ್ಯಗಳನ್ನು ನೀಡಿ ಪುನಃ ವಿಶ್ವಮಾನವನನ್ನಾಗಿ ಮಾಡುವ, ಸರ್ವರು ಸಮಾನರು ಎಂಬ ಭಾತೃತ್ವದ ಚಿಂತನೆ ಸಾರಿದ ಮೇರು ದಾರ್ಶನಿಕ ರಾಷ್ಟ್ರಕವಿ ಕುವೆಂಪು ಅವರಾಗಿದ್ದಾರೆ. ಜಾತಿ, ಧರ್ಮ, ಮೌಢ್ಯತೆಯಂತಹ ಮುಂತಾದ ಸಾಮಾಜಿಕ ಅನಿಷ್ಟಗಳ ವಿರುದ್ಧ 'ವಿಶ್ವ ಭಾತೃತ್ವ'ವನ್ನು ಪ್ರತಿಪಾದಿಸಿದ್ದಾರೆ. ವೈಚಾರಿಕತೆಯನ್ನು ವಿದ್ಯಾರ್ಥಿದೆಸೆಯಿಂದಲೇ ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ. ಕ್ರಾಂತಿಯ ಮನೋಭಾವ ಕೇವಲ ರಾಜಕೀಯಕ್ಕೆ ಮಾತ್ರ ಸೀಮಿತವಾಗಿರದೆ, ಸಾಹಿತ್ಯದಲ್ಲಿಯೂ ಇರಬೇಕೆಂದು ಅವರ ನಿಲುವಾಗಿತ್ತು. ಏಕದೇವೋಪಾಸನೆ, ಬಸವಣ್ಣನವರನ್ನು 'ಯುಗ ಪ್ರವರ್ತಕ'ರೆಂದು ಹೇಳಿದ್ದಾರೆ. 'ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು' ಎಂದು ಹೇಳುವ ಮೂಲಕ ಎಲ್ಲರಲ್ಲಿಯೂ ಕನ್ನಡತನ ಗುಣ ಮೈಗೂಡಿಸಿಕೊಳ್ಳಬೇಕು ಎಂದು ಕರೆಕೊಟ್ಟಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕಸಾಪ ಉತ್ತರ ವಲಯದ ಗೌರವ ಅಧ್ಯಕ್ಷ ಶಿವಯೋಗೆಪ್ಪಾ ಎಸ್.ಬಿರಾದಾರ, ಸಂಸ್ಥೆಯ ಅಧ್ಯಕ್ಷ ಅಸ್ಲಾಂ ಶೇಖ್, ಶಿಕ್ಷಕಿಯರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಅಧ್ಯಾಪಕರು ಸಾಂಪ್ರದಾಯಿಕ ತರಗತಿ ಉಪನ್ಯಾಸ ವ್ಯಾಪ್ತಿ ಮೀರಬೇಕು: ಪ್ರೊ. ಬಟ್ಟು ಸತ್ಯನಾರಾಯಣ



ಕಲಬುರಗಿ: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ (ಸಿಯುಕೆ) ಸಾರ್ವಜನಿಕ ಆಡಳಿತ ವಿಭಾಗವು ಆಂತರಿಕ ಗುಣಮಟ್ಟ ಭರವಸೆ ಕೋಶದ (ಐಕ್ಯೂಎಸಿ) ಸಹಯೋಗದೊಂದಿಗೆ ಅಧ್ಯಾಪಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳಿಗಾಗಿ ತರಗತಿಯಲ್ಲಿ ಸಿದ್ಧಾಂತ ಬೋಧನೆಯ ಶಿಕ್ಷಣ ವಿಧಾನಗಳು ಎಂಬ ವಿಷಯದ ಕುರಿತು ಒಂದು ದಿನದ ಅಧ್ಯಾಪಕರ ಅಭಿವೃದ್ಧಿ ಕಾರ್ಯಕ್ರಮವನ್ನು ಬುಧವಾರ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ಆಯೋಜಿಸಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಿಯುಕೆ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಅವರು, ಪ್ರಾಧ್ಯಾಪಕರು ಕೇವಲ ಪಾಠ ಬೋಧಕರಾಗಿರದೆ, ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆ, ಸೃಜನಶೀಲತೆ ಹಾಗೂ ಸಮಸ್ಯೆಗಳನ್ನು ಪರಿಹರಿಸುವ ಕೌಶಲ್ಯವನ್ನು ಬೆಳೆಸುವ ಮಾರ್ಗದರ್ಶಕರಾಗಬೇಕು ಎಂದು ಹೇಳಿದರು. ಬೋಧನೆಯು ಕೇವಲ ಉಪನ್ಯಾಸ ನೀಡುವುದು ಮತ್ತು ಪಠ್ಯಕ್ರಮವನ್ನು ಪೂರ್ಣಗೊಳಿಸುವುದಕ್ಕೆ ಸೀಮಿತವಾಗಬಾರದು. ಬದಲಾಗಿ, ವಿದ್ಯಾರ್ಥಿಗಳಲ್ಲಿ ಸಕ್ರಿಯ ಕಲಿಕೆ, ಸ್ವತಂತ್ರ ಚಿಂತನೆ ಹಾಗೂ ಜ್ಞಾನಾನ್ವೇಷಣೆಯ ಮನೋಭಾವವನ್ನು ಉತ್ತೇಜಿಸುವ ಪರಿಣಾಮಕಾರಿ ಕಲಿಕಾ ವಾತಾವರಣವನ್ನು ಅಧ್ಯಾಪಕರು ರೂಪಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಸಮಕಾಲೀನ ಶೈಕ್ಷಣಿಕ ಮತ್ತು ಸಾಮಾಜಿಕ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಉನ್ನತ ಶಿಕ್ಷಣ ಸಂಸ್ಥೆಗಳ ಬೋಧನೆ ಮತ್ತು ಕಲಿಕೆಯ ವಿಧಾನಗಳಲ್ಲಿ ಗುಣಾತ್ಮಕ ಪರಿವರ್ತನೆ ತರುವುದು ಅತ್ಯಗತ್ಯ ಎಂದು ಅವರು ಪ್ರತಿಪಾದಿಸಿದರು.

ವಿಶ್ವವಿದ್ಯಾಲಯಗಳು ಕೇವಲ ಉಪನ್ಯಾಸ ನೀಡುವುದು ಮತ್ತು ಪದವಿಗಳನ್ನು ಪ್ರದಾನ ಮಾಡುವುದಕ್ಕೆ ಸೀಮಿತವಾಗದೆ, ಗುಣಮಟ್ಟದ ಶಿಕ್ಷಣ, ಅರ್ಥಪೂರ್ಣ ಸಂಶೋಧನೆ, ನಾವೀನ್ಯತೆ ಹಾಗೂ ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಅವರು ಹೇಳಿದರು.

ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿ ಪರಿಚಯಿಸಿರುವ ಮೌಲ್ಯಮಾಪನ ಮತ್ತು ಮಾನ್ಯತಾ ವ್ಯವಸ್ಥೆಯು ಉನ್ನತ ಶಿಕ್ಷಣ ಸಂಸ್ಥೆಗಳ ಕಾರ್ಯಕ್ಷಮತೆ ಹಾಗೂ ಶೈಕ್ಷಣಿಕ ಗುಣಮಟ್ಟವನ್ನು ಸಮಗ್ರವಾಗಿ ಪರಿಶೀಲಿಸಲು ಸಹಕಾರಿಯಾಗಿದೆ ಎಂದು ಅವರು ಹೇಳಿದರು. ವಿಶ್ವವಿದ್ಯಾಲಯಗಳ ಗುಣಮಟ್ಟವನ್ನು ಕೇವಲ ಪ್ರದಾನ ಮಾಡಿದ ಪದವಿಗಳ ಸಂಖ್ಯೆ ಅಥವಾ ಪ್ರಕಟಿಸಿದ ಸಂಶೋಧನಾ ಪ್ರಬಂಧಗಳ ಆಧಾರದ ಮೇಲೆ ಅಳೆಯಬಾರದು. ಬದಲಾಗಿ, ಬೋಧನೆ ಮತ್ತು ಕಲಿಕೆಯ ಗುಣಮಟ್ಟ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ, ಉದ್ಯೋಗಾವಕಾಶಗಳು, ಸಂಶೋಧನಾ ಫಲಿತಾಂಶಗಳು, ಸಮಾಲೋಚನಾ ಸೇವೆಗಳು, ನಾವೀನ್ಯತೆ ಹಾಗೂ ಸಮಾಜ ಮತ್ತು ರಾಷ್ಟ್ರದ ಅಭಿವೃದ್ಧಿಗೆ ನೀಡುವ ಕೊಡುಗೆಗಳನ್ನೂ ಪರಿಗಣಿಸಿ ಮೌಲ್ಯಮಾಪನ ಮಾಡಬೇಕು ಎಂದು ಅವರು ಅಭಿಪ್ರಾಯಪಟ್ಟರು.

ತ್ಯಾಜ್ಯ ನಿರ್ವಹಣೆ, ಸಂಚಾರ ದಟ್ಟಣೆ, ಒಳಚರಂಡಿ ವ್ಯವಸ್ಥೆ ಹಾಗೂ ವಸತಿ ಸಮಸ್ಯೆಗಳಂತಹ ಸಮಕಾಲೀನ ಸವಾಲುಗಳಿಗೆ ಕ್ಷೇತ್ರಾಧಾರಿತ ಸಂಶೋಧನೆ ಮತ್ತು ಸಾಕ್ಷ್ಯಾಧಾರಿತ ನೀತಿ ಶಿಫಾರಸುಗಳ ಮೂಲಕ ಪರಿಹಾರ ಕಂಡುಕೊಳ್ಳಲು ವಿಶ್ವವಿದ್ಯಾಲಯಗಳು ಮುಂದಾಗಬೇಕು ಎಂದು ಅವರು ಹೇಳಿದರು. ಸಂಶೋಧನಾ ವಿದ್ಯಾರ್ಥಿಗಳು ಕೇವಲ ಸಂಶೋಧನಾ ಪ್ರಬಂಧಗಳ ಪ್ರಕಟಣೆಗೆ ಸೀಮಿತವಾಗದೆ, ನಾವೀನ್ಯತೆ, ಪೇಟೆಂಗಳ ನೋಂದಣಿ ಹಾಗೂ ರಾಷ್ಟ್ರದ ಅಭಿವೃದ್ಧಿಗೆ ಪೂರಕವಾದ ಸಂಶೋಧನಾ ಫಲಿತಾಂಶಗಳ ಸಾಧನೆಗೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು. ಭಾರತ ಸರ್ಕಾರದ ಒಂದು ದೇಶ, ಒಂದು ಚಂದಾದಾರಿಕೆಯೋಜನೆಯಡಿ ಲಭ್ಯವಿರುವ ಸಂಶೋಧನಾ ನಿಯತಕಾಲಿಕೆಗಳು ಸೇರಿದಂತೆ ವಿವಿಧ ಶೈಕ್ಷಣಿಕ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು ಎಂದು ಅವರು ತಿಳಿಸಿದರು.

.ಸಿಯುಕೆಯ ಎಂಜಿನಿಯರಿಂಗ್ ನಿಕಾಯದ ಡೀನ್ ಹಾಗೂ ಐಕ್ಯೂಎಸಿ ನಿರ್ದೇಶಕ ಪ್ರೊ. ಅಮರೇಂದ್ರ ಮಸ್ತ ಅವರು ಮಾತನಾಡಿ, ಭಾರತವು ಶ್ರೀಮಂತ ಬೋಧನಾ ಪರಂಪರೆಯನ್ನು ಹೊಂದಿದ್ದು, ಐತಿಹಾಸಿಕವಾಗಿ ವಿಶ್ವಗುರುವಾಗಿ ಗುರುತಿಸಿಕೊಂಡಿದೆ ಎಂದು ಹೇಳಿದರು. ಯುಜಿಸಿ ಮತ್ತು ಎಐಸಿಟಿಇ ಮಾರ್ಗಸೂಚಿಗಳಂತಹ ಔಪಚಾರಿಕ ವ್ಯವಸ್ಥೆಗಳ ಜೊತೆಗೆ ವಿವಿಧ ಅನೌಪಚಾರಿಕ ಬೋಧನಾ ಪದ್ಧತಿಗಳೂ ಅಸ್ತಿತ್ವದಲ್ಲಿವೆ. ಆದಾಗ್ಯೂ, ಇಂದಿನ ವಿದ್ಯಾರ್ಥಿಗಳ ಕಲಿಕಾ ಅಗತ್ಯಗಳಿಗೆ ಅನುಗುಣವಾಗಿ ಬೋಧನೆಯನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ಅಧ್ಯಾಪಕರು ತಮ್ಮ ಬೋಧನಾ ವಿಧಾನಗಳನ್ನು ನಿರಂತರವಾಗಿ ಸುಧಾರಿಸಿಕೊಳ್ಳಬೇಕು ಎಂದು ತಿಳಿಸಿದರು.

ಸಮಾಜ ಮತ್ತು ವರ್ತನಾ ವಿಜ್ಞಾನಗಳ ನಿಕಾಯದ ಡೀನ್ ಪ್ರೊ. ಪವಿತ್ರಾ ಆರ್. ಆಲೂರು ಹಾಗೂ ಮಾನವಿಕ ಮತ್ತು ಭಾಷೆಗಳ ನಿಕಾಯದ ಡೀನ್ ಪ್ರೊ. ಗಣೇಶ್ ಪವಾರ್ ಅವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಾರ್ವಜನಿಕ ಆಡಳಿತ ವಿಭಾಗದ ಮುಖ್ಯಸ್ಥ ಪ್ರೊ. ಪ್ರಭಾಕರನ್ ಸೆಲ್ವರಾಜ್ ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕ ಹಾಗೂ ಕಾರ್ಯಕ್ರಮದ ಸಂಚಾಲಕ ಡಾ. ಕಿರಣ್ ಎಂ. ಗಾಜನೂರು ಅವರು ಕಾರ್ಯಾಗಾರದ ಉದ್ದೇಶ ಮತ್ತು ಮಹತ್ವವನ್ನು ವಿವರಿಸಿದರು. ಡಾ. ಮಲ್ಲಿಕಾರ್ಜುನ ಹೂಗಾರ ವಂದಿಸಿದರು.

ಕಾರ್ಯಕ್ರಮವು ವಂದೇ ಮಾತರಂನೊಂದಿಗೆ ಆರಂಭಗೊಂಡು ರಾಷ್ಟ್ರಗೀತೆಯೊಂದಿಗೆ ಮುಕ್ತಾಯಗೊಂಡಿತು. ಸಂಗೀತ ಮತ್ತು ಲಲಿತಕಲೆ ವಿಭಾಗದ ವಿದ್ಯಾರ್ಥಿಗಳು ದೇಶಭಕ್ತಿ ಗೀತೆಗಳನ್ನು ಪ್ರಸ್ತುತಪಡಿಸಿದರು.

ಕಾರ್ಯಾಗಾರದಲ್ಲಿಶಿಕ್ಷಣಕ್ಷೇತ್ರದಖ್ಯಾತಪ್ರಾಧ್ಯಾಪಕರು ಹಾಗೂ ತಜ್ಞರಿಂದ ಮೂರು ವಿಶೇಷ ಅಧಿವೇಶನಗಳನ್ನು ಆಯೋಜಿಸಲಾಗಿತ್ತು. ಹೈದರಾಬಾದ್ ವಿಶ್ವವಿದ್ಯಾಲಯದ ತುಲನಾತ್ಮಕ ಸಾಹಿತ್ಯ ಕೇಂದ್ರದ ಪ್ರಾಧ್ಯಾಪಕಿ ಪ್ರೊ. ಸೌಮ್ಯ ದೇಚಮ್ಮ ಸಿ.ಸಿ. ಅವರು ವಿಮರ್ಶಾತ್ಮಕ ಶಿಕ್ಷಣಶಾಸ್ತ್ರ: ಒಂದು ಪರಿಚಯ ವಿಷಯದ ಕುರಿತು ಮೊದಲ ಅಧಿವೇಶನ ನಡೆಸಿಕೊಟ್ಟರು. ಮಂಗಳೂರು ವಿಶ್ವವಿದ್ಯಾಲಯದ ರಾಜಕೀಯ ವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ. ರಾಜಾರಾಮ್ ತೋಳ್ಪಾಡಿ ಅವರು ವಿಮರ್ಶಾತ್ಮಕ ಪ್ರತಿಫಲಿತ ಶಿಕ್ಷಣಶಾಸ್ತ್ರ ವಿಷಯದ ಕುರಿತು ಎರಡನೇ ಅಧಿವೇಶನ ನಡೆಸಿದರು. ತುಮಕೂರು ವಿಶ್ವವಿದ್ಯಾಲಯದ ಇಂಗ್ಲಿಷ್ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಹಿರಿಯ ಪ್ರಾಧ್ಯಾಪಕ ಹಾಗೂ ವಿಭಾಗದ ಅಧ್ಯಕ್ಷ ಪ್ರೊ. ಎನ್. ಎಸ್. ಗುಂಡೂರ್ ಅವರು ತರಗತಿಯಲ್ಲಿ ಸಿದ್ಧಾಂತ ಬೋಧನೆಗೆ ಮಾನವೀಯ ವಿಧಾನ ವಿಷಯದ ಕುರಿತು ಮೂರನೇ ಅಧಿವೇಶನ ನಡೆಸಿಕೊಟ್ಟರು.

ಸಿಯುಕೆ ಪ್ರಾಧ್ಯಾಪಕರಾದ ಪ್ರೊ. ವಿಕ್ರಮ್ ವಿಸಾಜಿ, ಪ್ರೊ. ಚನ್ನವೀರ ಆರ್. ಎಂ., ಪ್ರೊ. ವಿಜಯೇಂದ್ರ ಪಾಂಡೆ, ಡಾ. ವಾಣಿಶ್ರೀ ಜೆ., ಡಾ. ಸಂದೀಪ್ ಇನಾಂಪುಡಿ, ಡಾ. ಹರೀಶ್ ಚೌಧರಿ, ಡಾ. ರೋಹಿಣಾಕ್ಷ ಶಿರ್ಲಾಲು, ಡಾ. ಶಿವಮೂರ್ತಿ, ಡಾ. ರಾಜಶ್ರೀ, ಡಾ. ಅರ್ಜುನ್ ಆರ್., ಡಾ. ಕೆ. ತಿಯ್ಯಾಗು, ಡಾ. ಮಯೂರ್ ಪೂಜಾರಿ, ಡಾ. ಸುರೇಶ್ ಅನುಗಂಟಿ, ಡಾ. ಪಿ. ಕುಮಾರ್ ಮಂಗಳಂ, ಡಾ. ಇನಾಮುಲ್ ಆಜಾದ್ ಹಾಗೂ ಕುಮಾರಿ ಪಿಯಾಲಿ ರಾಯ್ ಸೇರಿದಂತೆ ದೇಶದ ವಿವಿಧ ಭಾಗಗಳಿಂದ ಆಗಮಿಸಿದ ಪ್ರತಿನಿಧಿಗಳು, ಸಂಪನ್ಮೂಲ ವ್ಯಕ್ತಿಗಳು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ಬಸ್ ಗಳ ಕೊರತೆ ಪ್ರಯಾಣಿಕರ ಪರದಾಟ : ಹೆಚ್ಚುವರಿ ಬಸ್ ಕಾರ್ಯಾಚರಣೆಗೆ ವಿದ್ಯಾರ್ಥಿಗಳು ಸಾರ್ವಜನಿಕರ ಆಗ್ರಹ



ಸೇಡಂ: ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿನ ಸಮರ್ಪಕ ಬಸ್‌ಗಳ ಕೊರತೆಯಿಂದಾಗಿ ನಿತ್ಯ ಪ್ರಯಾಣಿಸುವ ಸಾರ್ವಜನಿಕರು ವಿದ್ಯಾರ್ಥಿಗಳು ಹಾಗೂ ಸರ್ಕಾರಿ ನೌಕರರು ಕೂಡಾ ತೀವ್ರ ಪರದಾಡುವಂತಾಗಿದೆ. ಬೆಳಗ್ಗೆ ಮತ್ತು ಸಂಜೆಯ ಪೀಕ್ ಅವಗಳಲ್ಲಿ ಬಸ್ ನಿಲ್ದಾಣಗಳಲ್ಲಿ ಪ್ರಯಾಣಿಕರ ದಂಡೇ ಕಂಡುಬರುತ್ತಿದ್ದು, ನಿಗದಿತ ಸಮಯಕ್ಕೆ ಬಸ್‌ಗಳು ಬಾರದ ಕಾರಣ ಜನರು ಗಂಟೆಗಟ್ಟಲೆ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ ತಪ್ಪಾಗಲಾರದು. ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಉಚಿತ ಪ್ರಯಾಣದ ಸೌಲಭ್ಯ ಕಲ್ಪಿಸಿದ ಬಳಿಕ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ದುಪ್ಪಟ್ಟಾಗಿದ್ದು ನಿಜ ಸಂಗಾತಿ.

ಆದರೆ ಸೇಡಂ ತಾಲೂಕಿನಿಂದ ವಿವಿಧ ಹಳ್ಳಿಗಳಿಗೆ ಹಾಗೂ ಕಲಬುರ್ಗಿ ಯಾದ್ಗಿರ್, ಚಿಂಚೋಳಿ ಸೇರಿದಂತೆ ವಿವಿಧಡೆಗೆ ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ ಬಸ್‌ಗಳನ್ನು ರಸ್ತೆಗಿಳಿಸುವಲ್ಲಿ ಸಾರಿಗೆ ನಿಗಮ ವಿಫಲವಾಗಿದೆ ಆರೋಪ ಕೇಳಿಬಂದಿದೆ.

ಇದರಿಂದಾಗಿ ಶಾಲಾಕಾಲೇಜು ವಿದ್ಯಾರ್ಥಿಗಳು ತರಗತಿಗಳಿಗೆ ತಡವಾಗಿ ತಲುಪುತ್ತಿದ್ದರೆ, ಖಾಸಗಿ ಹಾಗೂ ಸರ್ಕಾರಿ ನೌಕರರು ಕಚೇರಿಗಳಿಗೆ ಸರಿಯಾದ ಸಮಯಕ್ಕೆ ಹೋಗಲಾಗದೆ ಸಂಕಷ್ಟ ಅನುಭವಿಸುತ್ತಿದ್ದಾರೆ.ಬಹುತೇಕ ಮಾರ್ಗಗಳಲ್ಲಿ ಬಸ್‌ಗಳು ಕಿಕ್ಕಿರಿದು ತುಂಬಿ ಸಂಚರಿಸುತ್ತಿವೆ. ಬಸ್‌ಗಳ ಒಳಗೆ ಕಾಲಿಡಲೂ ಜಾಗವಿಲ್ಲದ ಕಾರಣ ಅನೇಕ ಪ್ರಯಾಣಿಕರು ಫುಟ್‌ಬೋರ್ಡ್ ಅಥವಾ ಬಾಗಿಲಿನ ಮೆಟ್ಟಿಲು ಮೇಲೆ ನಿಂತು ಅಪಾಯಕಾರಿಯಾಗಿ ಪ್ರಯಾಣಿಸುವ ದೃಶ್ಯ ಸಾಮಾನ್ಯವಾಗಿದೆ. ವೃದ್ಧರು, ಮಕ್ಕಳು ಹಾಗೂ ಗರ್ಭಿಣಿಯರು ಬಸ್ ಹತ್ತಲು ಹರಸಾಹಸ ಪಡಬೇಕಾಗಿದೆ. ಒಟ್ಟಾರೆಯಾಗಿ ಸಾರಿಗೆ ನಿಗಮದ ಅಧ್ಯಕ್ಷರು, ಅಧಿಕಾರಿಗಳು ಪ್ರಯಾಣಿಕರ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ತಕ್ಷಣವೇ ಹೆಚ್ಚುವರಿ ಬಸ್‌ಗಳ ಕಾರ್ಯಾಚರಣೆಗೆ ಕ್ರಮ ಕೈಗೊಳ್ಳದಿದ್ದರೆ ಸಾರ್ವಜನಿಕರು ವಿದ್ಯಾರ್ಥಿಗಳ ಪಾಲಕರು, ವಿವಿಧ ಕನ್ನಡಪರ ಸಂಘಟನೆ ದಲಿತಪರ ಸಂಘಟನೆ ಬೀದಿಗಿಳಿದು ಪ್ರತಿಭಟನೆ ನಡೆಸುವ ಎಚ್ಚರಿಕೆ ನೀಡಿದ್ದಾರೆ.

ಸಾರ್ವಜನಿಕರ ಶಾಲಾ ಕಾಲೇಜು ವಿದ್ಯಾರ್ಥಿಗಳ ಪ್ರಮುಖ ಆಗ್ರಹಗಳು:

1)ದಟ್ಟಣೆಯ ಸಮಯದಲ್ಲಿ (ಬೆಳಗ್ಗೆ 7 ರಿಂದ 10 ಹಾಗೂ ಸಂಜೆ 5 ರಿಂದ 8 ರವರೆಗೆ) ಪ್ರಮುಖ ಮಾರ್ಗಗಳಲ್ಲಿ ಹೆಚ್ಚುವರಿ ಬಸ್‌ಗಳನ್ನು ನಿಯೋಜಿಸಬೇಕು.2)ಗ್ರಾಮೀಣ ಭಾಗಗಳಿಗೆ ಹಾಗೂ ಶಾಲಾ-ಕಾಲೇಜು ಸಮಯಕ್ಕೆ ಸರಿಯಾಗಿ ವಿಶೇಷ ಬಸ್‌ಗಳ ಸಂಚಾರ ಆರಂಭಿಸಬೇಕು.3) ಹಳೆಯ ಹಾಗೂ ದುರಸ್ತಿಯಲ್ಲಿರುವ ಬಸ್‌ಗಳನ್ನು ಸರಿಪಡಿಸಿ ತಕ್ಷಣವೇ ಸೇವೆಗೆ ಬಳಸಿಕೊಳ್ಳಬೇಕು.

ಪ್ರತಿದಿನ ಬೆಳಗ್ಗೆ 8 ಗಂಟೆಗೆ ನಿಲ್ದಾಣಕ್ಕೆ ಬಂದರೆ, ಬಸ್ ಸಿಗುವುದು 9 ಗಂಟೆಗೆ ಬರುವ ಬಸ್‌ಗಳೂ ಸಂಪೂರ್ಣ ಭರ್ತಿಯಾಗಿರುತ್ತವೆ ಇದರಿಂದ ಶಾಲಾ ಕಾಲೇಜಿಗೆ ಸರಿಯಾದ ಸಮಯಕ್ಕೆ ಹೋಗಲು ಸಾಧ್ಯವಾಗುತ್ತಿಲ್ಲ. ಸ್ಥಳೀಯ ಶಾಸಕರು ಸಚಿವರು, ಹಾಗೂ ಅಧಿಕಾರಿಗಳು ತಕ್ಷಣವೇ ಹೆಚ್ಚುವರಿ ಬಸ್‌ಗಳ ವ್ಯವಸ್ಥೆ ಮಾಡಬೇಕು.

ಬಸ್ ಗಳ ಕೊರತೆಯಿಂದ ಪ್ರಯಾಣಿಕರು ಪರದಾಡುವಂತ ಪರಿಸ್ಥಿತಿ ನಿರ್ಮಾಣವಾಗುತ್ತಿದ್ದು ಕಡಿಮೆ ಬಸ್ಸುಗಳ ಸಂಚಾರದಿಂದ ಬಹುತೇಕ ಬಸ್ಗಳಲ್ಲಿ ಬರ್ತಿಯಾಗುತ್ತಿವೆ, ಆದ್ದರಿಂದ ಹೆಚ್ಚುವರಿ ಬಸ್ ಬಿಡುವ ವ್ಯವಸ್ಥೆ ಸರ್ಕಾರದ ವತಿಯಿಂದ ಮಾಡಬೇಕಿದೆ.

ನ್ಯೂಮೋನಿಯಾ ಬಗ್ಗೆ ಭಯ ಬೇಡ, ಮುಂಜಾಗ್ರತೆ ಅಗತ್ಯ



ಕಲಬುರಗಿ: ವಿಪರಿತ ಜ್ವರ, ಚಳಿಯಾಗುವುದು, ಉಸಿರುಗಟ್ಟುವುದು, ಕೆಮ್ಮು, ಕಫದಲ್ಲಿ ರಕ್ತ, ಮೈ-ಕೈ ನೋವು, ಸುಸ್ತು, ವಾಕರಿಕೆ, ಸಂಧಿವಾತ, ಸ್ನಾಯು ಎಳೆತದಂತಹ ಲಕ್ಷಣಗಳು ನ್ಯೂಮೋನಿಯಾದಾಗಿವೆ. ಇವುಗಳು ಕಂಡುಬಂದರೆ ಭಯ ಪಡದೆ, ನಿರ್ಲಕ್ಷ್ಯ ಮಾಡದೆ ಸೂಕ್ತ ಚಿಕಿತ್ಸೆ ಪಡೆಯುವ ಮೂಲಕ ಆರೋಗ್ಯಯುತವಾಗಬೇಕು ಎಂದು ವೈದ್ಯಾಧಿಕಾರಿ ಡಾ.ಅನುಪಮಾಎಸ್.ಕೇಶ್ವಾರ ಹೇಳಿದರು. ನಗರದ ಶೇಖರೋಜಾದಲ್ಲಿನ ಶಹಾಬಜಾರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದೆ ಜರುಗಿದ 'ವಿಶ್ವ ನ್ಯುಮೋನಿಯಾ ದಿನಾಚರಣೆ'ಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ನ್ಯೂಮೋನಿಯಾಜ್ವರ ಶ್ವಾಸಕೋಶಕ್ಕೆ ಸಂಬಂಧಿಸಿದ ಸಾಂಕ್ರಾಮಿಕ ಕಾಯಿಲೆಯಾಗಿರುತ್ತದೆ. ಇದು ಎಲ್ಲಾ ವಯೋಮಾನದವರಲ್ಲಿ ಕಂಡುಬರುತ್ತದೆ. ವಿಶೇಷವಾಗಿ ಮಕ್ಕಳಲ್ಲಿ ಮತ್ತು ವಯೋವೃದ್ಧರಲಿ ರೋಗನಿರೋಧಕ ಶಕ್ತಿ ಕಡಿಮೆಯಿರುವುದುರಿಂದ ಹೆಚ್ಚು ಬಾಧಿಸುತ್ತದೆ. ಆಗ ಶ್ವಾಸಕೋಶದಲ್ಲಿ ಬ್ಯಾಕ್ಟರೀಯಾ, ವೈರಸ್, ಶಿಲೀಂಧ್ರ ಅಥವಾ ಇನ್ನಾವುದೇ ರೋಗಾಣುಗಳಿಂದ ಸೊಂಕು ತಗುಲಿ ನ್ಯೂಮೋನಿಯಾ ಉಂಟಾಗುತ್ತದೆ ಎಂದರು.

ನ್ಯೂಮೋನಿಯಾ ಕಾಯಿಲೆಯು ರೋಗಗ್ರಸ್ಥ ವ್ಯಕ್ತಿ ಸೀನಿದಾಗ, ಕೆಮ್ಮಿದಾಗ, ಆತನು ಬಳಸಿದ ಬಟ್ಟೆ,ತಟ್ಟೆ, ಬಟ್ಟಲು, ಲೋಟ, ಚಮಚ, ಕರವಸ್ತ್ರ, ಟವೆಲ್, ಉಡುಪುಗಳನ್ನು ಬಳಸಿದಾಗ ಇತರರಿಗೆ ಹರಡುತ್ತದೆ. ನ್ಯೂಮೋನಿಯಾಕ್ಕೆ ಚಿಕಿತ್ಸೆಯ ಮೂಲಕ ನಿವಾರಿಸಿಕೊಳ್ಳಬಹುದಾಗಿದೆ. ಸ್ವಚ್ಛವಾಗಿ ಕೈತೊಳೆಯುವುದು, ರೋಗಿಗಳಿಂದ ದೂರವಿರುವುದು, ಆರಂಭಿಕ ಹಂತದಲ್ಲಿಯೇ ಕಾಯಿಲೆಯನ್ನು ಗುರ್ತಿಸಿ ಚಿಕಿತ್ಸೆ ಪಡೆಯುವ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಾಗಿದೆ ಎಂದು ಹೇಳಿದರು

ಕಾರ್ಯಕ್ರಮದಲ್ಲಿ ಉಪನ್ಯಾಸಕ, ಬಳಗದ ಅಧ್ಯಕ್ಷ ಎಚ್.ಬಿ.ಪಾಟೀಲ್, ಸಮಾಜ ಸೇವಕ ಶಿವಯೋಗೆಪ್ಪಾ ಎಸ್. ಬಿರಾದಾರ, ಆರೋಗ್ಯಕೇಂದ್ರದ ಸಿಬ್ಬಂದಿಗಳಾದ ರೇಶ್ಮಾ ನಕ್ಕುಂದಿ, ನಾಗೇಶ್ವರಿ ಮುಗಳಿವಾಡಿ, ಸಂಗಮ್ಮ ಅತನೂರ, ಗಂಗಾಜ್ಯೋತಿ ಗಂಜಿ, ಮಂಗಲಾ ಚಂದಾಪುರೆ, ಅರ್ಚನಾ ಸಿಂಗೆ, ಜಗನಾಥ ಗುತ್ತೇದಾರ, ಚಂದ್ರಕಲಾ ಮಠಪತಿ, ಲಕ್ಷ್ಮೀ ಮೈಲಾರಿ, ನಾಗಮ್ಮ ಚಿಂಚೋಳಿ ಸೇರಿದಂತೆ ಇನ್ನಿತರರು ಇದ್ದರು.



ಪಂಢರಪುರಕ್ಕೆ ತೆರಳುವ ದಿಂಡಿ ಪಾದಯಾತ್ರೆಯ ಭಕ್ತರಿಗೆ ಅಲ್ಪೋಪಹಾರ ಸೇವೆ

■ **ಉದಯರಶ್ಮಿ ದಿನಪತ್ರಿಕೆ**

ಚಡಚಣ: ಕಾರ್ತಿಕ ಮಾಸದ ಏಕಾದಶಿ ಪ್ರಯುಕ್ತ ಬೆಳಗಾವಿ ಜಿಲ್ಲೆಯ ಓಬಳಾಪುರದಿಂದ ಪಂಢರಪುರಕ್ಕೆ ತೆರಳುತ್ತಿರುವ ದಿಂಡಿ ಪಾದಯಾತ್ರೆಯ ಭಕ್ತರಿಗೆ ಝುಳಕಿ ಗ್ರಾಮದ ನಾರಾಯಣ ಜಹಾಗೀರದಾರ ಅವರ ಮನೆಯಲ್ಲಿ ಅಲ್ಪೋಪಹಾರದ ವ್ಯವಸ್ಥೆ ಮಾಡಲಾಯಿತು.

ಝುಳಕಿ ಗ್ರಾಮದ ನಾರಾಯಣ ಜಹಾಗೀರದಾರ ಅವರ ಮನೆಯಲ್ಲಿ ತುಳಸಿ ವೃಂದಾವನದ ಭಜನೆ ಹಾಗೂ ಮಹಾಪೂಜೆ ನೆರವೇರಿಸಿದ ಬಳಿಕ ಪಾದಯಾತ್ರೆಯ ಭಕ್ತರಿಗೆ ಅಲ್ಪೋಪಹಾರ ವಿತರಿಸಿ ಸೇವೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಹಿರಿಯ ಮುಖಂಡರಾದ ಪಾಂಡುರಂಗ ಜಹಾಗೀರದಾರ, ಯುವ ಮುಖಂಡ ರಾಘವೇಂದ್ರ ಕಾಪಸೆ, ಅಕ್ಷಯ ಪ್ರ. ಝುಳಕಿ, ಮಲ್ಲಿಕಾರ್ಜುನ ಹೂಗಾರ, ರವಿ ತೇಲಿ, ಭೀಮರಾಯ ಬಿಲಕಾರ, ಕಲ್ಲಪ್ಪ ಶಿರಶ್ಯಾಡ, ಶ್ರೀಶೈಲ ಬಿರಾದಾರ, ಬಾಬುರಾಯ ಬಿರಾದಾರ, ರಾಜೇಂದ್ರ ಶಿರಶ್ಯಾಡ, ವಿಠ್ಠಲ ಕಾಗರ, ಸುನೀತಾ ಜಹಾಗೀರದಾರ, ವೈಭವಿ ಜಹಾಗೀರದಾರ, ರೇವತಿ ಹೂಗಾರ, ಜ್ಯೋತಿ ಡೋಳಿ, ಸಂಜನಾ ಕಾಪಸೆ, ಮಲ್ಲಮ್ಮ ತಳವಾರ, ಕಾವೇರಿ ಶಿರಶ್ಯಾಡ ಹಾಗೂ ಶರಣವ್ವ ತಳವಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಅಥಣಿಯಲ್ಲಿ ಜನಪರ ಸೇವೆಗೆ ಸಾಕ್ಷಿಯಾದ ಬೀಳ್ಕೊಡುಗೆ

■ **ಉದಯರಶ್ಮಿ ದಿನಪತ್ರಿಕೆ**

ಅಥಣಿ: ಅಧಿಕಾರಿ ಎಂದರೆ ಕೇವಲ ಹುದ್ದೆಯಲ್ಲ, ಜನರ ಮನಸ್ಸಿನಲ್ಲಿ ಉಳಿಯುವ ಕೆಲಸ ಮಾಡಿದಾಗಲೇ ಆತ ನಿಜವಾದ ಅಧಿಕಾರಿ. ಅಂತಹ ಅಪರೂಪದ ಅಧಿಕಾರಿ ಸಿದರಾಯ ಭೋಸಗಿ ಎಂದು ಮುಖಂಡ ಚಿದಾನಂದ ಸವದಿ ಬಣ್ಣಿಸಿದರು.

ನಗರದ ರಾಯಲ್ ಹಾಲ್‌ನಲ್ಲಿ ನಡೆದ ಪದೋನ್ನತಿ ಹೊಂದಿದ ತಹಸೀಲ್ದಾರ್ ಸಿದರಾಯ ಭೋಸಗಿ ಅವರ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.


"ಪ್ರತಿಯೊಬ್ಬ ಅಧಿಕಾರಿಯನ್ನು ಸಮಾಜ ಗುರುತಿಸುವುದು ಆತ ಮಾಡಿದ ಜನಪರ ಕೆಲಸದಿಂದಲೇ. ಅಥಣಿಯ ಜನತೆಯ ಪ್ರೀತಿ ಗಳಿಸಿ, ಅತ್ಯುತ್ತಮ ಸೇವೆ ನೀಡಿದ ಜನಾನುರಾಗಿ ಅಧಿಕಾರಿ ಅಂದರೆ ಅದು ಸಿದರಾಯ ಭೋಸಗಿ. ಮುಂದೆ ಅವರಿಗೆ ಇನ್ನೂ ದೊಡ್ಡ ಹುದ್ದೆ ಸಿಗಲಿ" ಎಂದು ಸವದಿ ಹಾರೈಸಿದರು.

ಸಮಾರಂಭದಲ್ಲಿ ಕಾಗವಾಡ ತಹಸೀಲ್ದಾರ್ ರವೀಂದ್ರ ಹಾದಿಮನಿ, ಶಿವಾನಂದ ಕಲ್ಲಾಪುರ, ಸಂತೋಷ ಹಳ್ಳೂರ, ವೆಂಕಟೇಶ ಕುಲಕರ್ಣಿ, ಗುರುರಾಜ ಸಂಪಣ್ಣವರ, ವೀರಣ್ಣ ವಾಲಿ, ಪ್ರವೀಣ ಹುಣಸಿಕಟ್ಟಿ, ರಾಮನಗೌಡ ಪಾಟೀಲ್, ಮಹಾದೇವ ಕೋಳಿ, ಎಂ.ಆರ್. ಮುಂಜೆ, ರವೀಂದ್ರ ಮುರಗಾಲಿ, ಪ್ರವೀಣ ಪಾಟೀಲ್, ಕರವೇ ಅಧ್ಯಕ್ಷ ಶಬ್ಬೀರ್ ಸಾತಬಚ್ಚೆ, ಕನ್ನಡಪರ ಹೋರಾಟಗಾರ ಅಣ್ಣಾಸಾಬ ತೆಲಸಂಗ, ಚುಸಾಪ ಅಧ್ಯಕ್ಷ ಡಾ. ರಾಮಣ್ಣ ದೊಡ್ಡನಿಂಗಪ್ಪಗೋಳ ಸೇರಿದಂತೆ ಕಂದಾಯ ಇಲಾಖೆ ಅಧಿಕಾರಿಗಳು, ನೌಕರರು, ವಿವಿಧ ಇಲಾಖೆ ಅಧಿಕಾರಿಗಳು, ಪತ್ರಕರ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

"ಅಥಣಿ ನನ್ನ ಹೃದಯದಲ್ಲಿ ಶಾಶ್ವತ" - ಭೋಸಗಿ ಭಾವುಕ

ಸನ್ಮಾನ ಸ್ವೀಕರಿಸಿ ಮಾತನಾಡಿದ ಸಿದರಾಯ ಭೋಸಗಿ, ಅಥಣಿಯನ್ನು ನೆನೆದು ಭಾವುಕರಾದರು.

"ನನ್ನ ಸೇವಾ ಅವಧಿಯಲ್ಲಿ ನನ್ನ ಹೃದಯದಲ್ಲಿ ಶಾಶ್ವತವಾಗಿ ಉಳಿಯುವ ಊರು ಅಥಣಿ. ಅಧಿಕಾರಿಗಳು ಜನರೊಂದಿಗೆ ಸೌಜನ್ಯದಿಂದ ನಡೆದುಕೊಳ್ಳಬೇಕು. ಅವರ ಜಾಗದಲ್ಲಿ ನಿಂತು ಯೋಚಿಸಿ ಸ್ಪಂದಿಸಬೇಕು. ಬಡವರ ಕಷ್ಟಕ್ಕೆ ಸ್ಪಂದಿಸುವುದೇ ಕಂದಾಯ ಇಲಾಖೆಯ ಮೊದಲ ಆದ್ಯತೆ" ಎಂದರು.





ಡಿ.10ರಂದು ಸುವರ್ಣ ಸೌಧ ಮುಂದೆ ಉಪವಾಸ ಸತ್ಯಾಗ್ರಹಕ್ಕೆ ಕರೆ

■ **ಉದಯರಶ್ಮಿ ದಿನಪತ್ರಿಕೆ**

ಸಿಂದಗಿ: 2024 ಡಿ 10 ರಂದು ಬೆಳಗಾವಿಯಲ್ಲಿ ನಡೆದ 2ಎ ಮೀಸಲಾತಿ ಹೋರಾಟವನ್ನು ಹತ್ತಿಕ್ಕಲು ಸರಕಾರ ಹಾಗೂ ಪೊಲೀಸರು ಲಾಠಿ ಪ್ರಹಾರ ನಡೆಸಿ ಸಮಾಜಕ್ಕೆ ನೋವು ಉಂಟು ಮಾಡಿದ್ದು ಅದರ ನಿಮಿತ್ಯ ಡಿ 10.26 ರಂದು ಬೆಳಗಾವಿ ಸುವರ್ಣ ಸೌಧ ಮುಂದೆ ಒಂದು ದಿನದ ಉಪವಾಸ ಸತ್ಯಾಗ್ರಹ ಹಮ್ಮಿಕೊಂಡು ಕರಾಳ ದಿನವನ್ನಾಗಿ ಆಚರಿಸೋಣ. ಕಾರಣ ಈ ತಾಲೂಕಿನಿಂದ ಸಹಸ್ರಾರು ಸಂಖ್ಯೆಯಲ್ಲಿ ಪಂಚಮಸಾಲಿ ಸಮಾಜದ ಎಲ್ಲ ಗುರು ಹಿರಿಯರು ಹಾಗೂ ಯುವ ಮಿತ್ರರು ಭಾಗವಹಿಸುವಂತೆ ಕೂಡಲಸಂಗಮ ಜಗದ್ಗುರು ಬಸವ ಜಯ ಮೃತ್ಯುಂಜಯ ಮಹಾಸ್ವಾಮಿಗಳು ಕರೆ ನೀಡಿದರು.

ನಗರದ ಬಸವ ಮಂಟಪದಲ್ಲಿ ಗುರುವಾರ ಸಂಜೆ ನಡೆಸಿದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಪಂಚಮಸಾಲಿ ಸಮಾಜದ ಅಧ್ಯಕ್ಷ ಎಂ ಎಂ ಹಂಗರಗಿ, ಮಾಜಿ ಜಿಪಂ ಉಪಾಧ್ಯಕ್ಷ ಸಿದ್ದರಾಮ ಪಾಟೀಲ ಹೂನಳ್ಳಿ ಮಾತನಾಡಿ, ಕಳೆದ 2024 ಡಿಸೆಂಬರ್ 10. ಬೆಳಗಾವಿಯಲ್ಲಿ ನಡೆದ ಹೋರಾಟದ ಸಂದರ್ಭದಲ್ಲಿ ಪಂಚಮಸಾಲಿ ಸಮಾಜದ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿ ದಬ್ಬಾಳಿಕೆ ನಡೆಸಿದ ದಿನವನ್ನು ನಾವೆಲ್ಲ ಮರೆಯುವಂತಿಲ್ಲ.ಈ ಘಟನೆ ನಮಗೆಲ್ಲ ಮರೆಯಲಾಗದ ಕಹಿ ದಿನ. ಈ ಕಹಿ ಘಟನೆ ನಡೆದ ದಿನವನ್ನು ಡಿಸೆಂಬರ್ 10.2026 ರಂದು ಪಂಚಮಸಾಲಿಗಳು ಕರಾಳ ದಿನವೆಂದು ಆಚರಿಸಿ ರಾಜ್ಯ ಸರಕಾರಕ್ಕೆ ಬಿಸಿ ಮುಟ್ಟಿಸೋಣ ಅದಕ್ಕೆ ರಾಜ್ಯದ ಮೂಲೆ ಮೂಲೆಯಿಂದ ಸಾವಿರಾರು ಸಂಖ್ಯೆಯಲ್ಲಿ ಸಮಾಜ ಬಾಂಧವರು ಆಗಮಿಸಿ ಶಕ್ತಿ ಪ್ರದರ್ಶನ ನೀಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಆನಂದ್ ಎನ್ ಶಾಬಾದಿ, ವ್ಹಿ ಬಿ ಕುರಡಿ. ಅಶೋಕ ಅಲ್ಲಾಪುರ. ವಕೀಲರಾದ ಸಿದ್ದನಗೌಡ ಪಾಟೀಲ ಗುಂದಗಿ, ದಾನಪಗೌಡ ಚನಗೊಂಡ. ಮುಖಂಡರಾದ ಶ್ರೀಶೈಲ್ ಯಳಮೇಲಿ, ಬಿ.ಜಿ ಚನಗೊಂಡ. ಕಾಳಣ್ಣ ಬಗಲಿ, ಶಂಕರ ಬಂಥನಾಳ. ಶಿವರಾಜ ಪೊ ಪಾಟೀಲ ಸೇರಿದಂತೆ ಅನೇಕರಿದ್ದರು

ಕೆಪಿಎಸ್‌ಸಿ ಪರೀಕ್ಷೆಗೆ ವಿಜಯಪುರ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ

■ **ಉದಯರಶ್ಮಿ ದಿನಪತ್ರಿಕೆ**

ವಿಜಯಪುರ: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ವತಿಯಿಂದ ನವೆಂಬರ್ 15ರಂದು ನಡೆಯಲಿರುವ ಗೆಜೆಟೆಡ್ ಪ್ರೊಬೇಷನರ್ಸ್ ಗ್ರೂಪ್ ಎ ಮತ್ತು ಬಿ ವೃಂದದ ಪೂರ್ವಭಾವಿ ಪರೀಕ್ಷೆಗೆ ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಸಕಲ ಸಿದ್ಧತೆ ಮಾಡಿಕೊಂಡಿದ್ದು, ಪರೀಕ್ಷೆಯನ್ನು ಪಾರದರ್ಶಕವಾಗಿ ಮತ್ತು ಯಾವುದೇ ಲೋಪದೋಷಗಳಿಲ್ಲದೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಆನಂದ್. ಕೆ. ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಒಟ್ಟು 20 ಪರೀಕ್ಷಾ ಕೇಂದ್ರಗಳಲ್ಲಿ 8,117 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ.ಕೆಪಿಎಸ್‌ಸಿ ನಿಗದಿಪಡಿಸಿರುವ ಪರೀಕ್ಷಾ ಮಾರ್ಗಸೂಚಿಯಂತೆ ಎಲ್ಲ ಅಗತ್ಯಸಿದ್ಧತೆಗಳನ್ನುಮಾಡಿಕೊಳ್ಳಲಾಗಿದೆ.ಪ್ರಶ್ನೆಪತ್ರಿಕೆಗಳನ್ನು ಮುನ್ನೆಚ್ಚರಿಕೆ ಕ್ರಮವಾಗಿ ಜಿಲ್ಲಾ ಖಜಾನೆಯಲ್ಲಿ ಭದ್ರವಾಗಿ ಇರಿಸಲಾಗಿದ್ದು, ಪರೀಕ್ಷಾ ಕೇಂದ್ರಗಳಿಗೆ ಸಾಗಿಸಲು ಎಂಟು ಮಾರ್ಗಗಳನ್ನು ಗುರುತಿಸಲಾಗಿದೆ.

ಪ್ರತಿ ಮಾರ್ಗಕ್ಕೂ ಮಾರ್ಗಾಧಿಕಾರಿಗಳನ್ನು ನೇಮಿಸಿ ಪೊಲೀಸ್ ಭದ್ರತೆಯೊಂದಿಗೆ ಪ್ರಶ್ನೆಪತ್ರಿಕೆಗಳನ್ನು ಸಾಗಿಸಲಾಗುವುದು. ಪರೀಕ್ಷೆ ಆರಂಭವಾಗುವ ಕನಿಷ್ಠ ಒಂದು ಗಂಟೆ ಮುಂಚಿತವಾಗಿ ಎಲ್ಲ ಕೇಂದ್ರಗಳಿಗೂ ಪ್ರಶ್ನೆಪತ್ರಿಕೆ ತಲುಪುವಂತೆ ವ್ಯವಸ್ಥೆ ಮಾಡಲಾಗಿದೆ ಎಂದರು.

ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಮುಖ್ಯ ಅಧೀಕ್ಷಕರು, ವೀಕ್ಷಕರು ಹಾಗೂ ಪ್ರಶ್ನೆಪತ್ರಿಕೆಗಳ ಉಸ್ತುವಾರಿಗಾಗಿ ಸಿಬ್ಬಂದಿ ನಿಯೋಜಿಸಲಾಗಿದೆ. ಇವರ ಸಮ್ಮುಖದಲ್ಲಿಯೇ ಪ್ರಶ್ನೆಪತ್ರಿಕೆಗಳನ್ನು ತೆರೆಯಲಾಗುವುದು. ಪ್ರತಿ ಕೊಠಡಿಯಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದ್ದು, ಪ್ರಶ್ನೆಪತ್ರಿಕೆ ತೆರೆಯುವ ಭದ್ರತಾ ಕೊಠಡಿಯಲ್ಲಿಯೂ ಸಿಸಿಟಿವಿ ವ್ಯವಸ್ಥೆ ಮಾಡಲಾಗಿದೆ. ಎಲ್ಲ ಕೇಂದ್ರಗಳ ದೃಶ್ಯಾವಳಿಗಳನ್ನು ನೇರ ವೆಬ್ ಕಾಸ್ಟಿಂಗ್ ಮೂಲಕ ಜಿಲ್ಲಾ



ಪಂಚಾಯಿತಿ ಕಚೇರಿಯಲ್ಲಿ ಸ್ಥಾಪಿಸಿರುವ ಕೇಂದ್ರದಿಂದ ಮೇಲ್ವಿಚಾರಣೆ ಮಾಡಲಾಗುವುದು. ಪ್ರತಿ ನಾಲ್ಕು ಪರೀಕ್ಷಾ ಕೇಂದ್ರಗಳ ಮೇಲ್ವಿಚಾರಣೆಗೆ ಓರ್ವ ವೀಕ್ಷಕರನ್ನು ನಿಯೋಜಿಸಲಾಗಿದೆ. ಗುರುವಾರ ಸಂಜೆ ನಡೆಸಿದ ಪ್ರಾಯೋಗಿಕ ಪರಿಶೀಲನೆಯಲ್ಲಿ ಎಲ್ಲ ಕೇಂದ್ರಗಳ ನೇರ ದೃಶ್ಯಾವಳಿಗಳು ಲಭ್ಯವಾಗಿರುವುದು ಖಚಿತವಾಗಿದೆ ಎಂದು ತಿಳಿಸಿದರು.

ಬೆಳಿಗ್ಗೆ 10ರಿಂದ ಮಧ್ಯಾಹ್ನ 12ರವರೆಗೆ ಹಾಗೂ ಮಧ್ಯಾಹ್ನ 2ರಿಂದ ಸಂಜೆ 4ರವರೆಗೆ ಎರಡು ಅಧಿವೇಶನಗಳಲ್ಲಿ ಪರೀಕ್ಷೆ ನಡೆಯಲಿದೆ. ಪ್ರತಿ ಅಧಿವೇಶನದ ಓಎಂಆರ್ ಹಾಳೆಗಳನ್ನು ಜಿಲ್ಲಾ ಪಂಚಾಯಿತಿ ಕಚೇರಿಯ ಸ್ಕ್ಯಾನಿಂಗ್ ಕೇಂದ್ರದಲ್ಲಿ ಸ್ಕ್ಯಾನ್ ಮಾಡಿ, ವೆಬ್ ಸೈಟ್ ಕೆಪಿ–ಎಸ್ಸಿ ಮೂಲಕ ಪ್ರಕಟಿಸಲಾಗುವುದು ಎಂದರು.

ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ವ್ಯಾಪ್ತಿಯಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯ ಕಲಂ 163ರ ಅನ್ವಯ ನಿಷೇಧಾಜ್ಞೆ ಜಾ–ರಿಗೊಳಿಸಲಾಗಿದೆ. ಈ ವ್ಯಾಪ್ತಿಯಲ್ಲಿರುವ ಸೈಬರ್ ಕೆಫೆ ಹಾಗೂ ಜೆರಾಕ್ಸ್ ಅಂಗಡಿ,ಕೋಚಿಂಗ್ ಸೆಂಟರ್ ತೆರೆಯದಂತೆ ಸೂಚಿಸಲಾಗಿದೆ. ಪರೀಕ್ಷೆಗೆ ನಿಯೋಜಿತ ಅಧಿಕಾರಿ, ಸಿಬ್ಬಂದಿಗೆ ಈಗಾಗಲೇ ಎರಡು ಹಂತಗಳಲ್ಲಿ ತರಬೇತಿ ನೀಡಲಾಗಿದ್ದು, ಬೆಂಗಳೂರಿನಲ್ಲಿ ತರಬೇತಿ ಪಡೆದ ಇಬ್ಬರು ಮಾಸ್ಟರ್ ತರಬೇತುದಾರರು ಜಿಲ್ಲಾಮಟ್ಟದ ಸಿಬ್ಬಂದಿಗೆ ತರಬೇತಿ ನೀಡಿದ್ದಾರೆ. ಈಗಾಗಲೇ ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ನಡೆಸುವಂತೆ ಕಟ್ಟುನಿಟ್ಟಾಗಿ ಸೂಚಿಸಲಾಗಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಹಾಗೂ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಂಜುನಾಥ ಗುಳೇದಗುಡ್ಡ ಉಪಸ್ಥಿತರಿದ್ದರು.

ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ :ಎಸ್ಪಿ ಲಕ್ಷ್ಮಣ ನಿಂಬರಗಿ



ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಮಾತನಾಡಿ, ಪರೀಕ್ಷೆ ಹಿನ್ನೆಲೆಯಲ್ಲಿ ಎಲ್ಲ ಪರೀಕ್ಷಾ ಕೇಂದ್ರಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಪ್ರಶ್ನೆಪತ್ರಿಕೆ ಸಾಗಾಟಕ್ಕೆ ಪೊಲೀಸ್ ಬೆಂಗಾವಲು ಹಾಗೂ ಶಸ್ತ್ರಸಜ್ಜಿತ ಸಿಬ್ಬಂದಿಯನ್ನು ನಿಯೋಜಿಸಲಾಗುತ್ತದೆ. ಪರೀಕ್ಷಾ ಕೇಂದ್ರದ ಆವರಣದೊಳಗೆ ಅನಧಿಕೃತ ವ್ಯಕ್ತಿಗಳಿಗೆ ಪ್ರವೇಶವಿರುವುದಿಲ್ಲ. ಮೊದಲ ಅಧಿವೇಶನದ ಪರೀಕ್ಷೆ ಮುಗಿದ ತಕ್ಷಣ ಅಭ್ಯರ್ಥಿಗಳು ಕೇಂದ್ರದ ಆವರಣದಿಂದ ಹೊರಗೆ ತೆರಳಬೇಕು. ಎರಡನೇ ಅಧಿವೇಶನಕ್ಕೆ ಬರುವ ಅಭ್ಯರ್ಥಿಗಳಿಗೆ ಹೊಸದಾಗಿ ಫ್ರಿಸ್ಕಿಂಗ್ ಮತ್ತು ಮುಖ ಗುರುತಿಸುವಿಕೆ ಪ್ರಕ್ರಿಯೆ ನಡೆಸಲಾಗುತ್ತದೆ.

ಧಾರ್ಮಿಕ ಉಡುಪು ಧರಿಸಿ ಬರುವ ಅಭ್ಯರ್ಥಿಗಳು ಪರೀಕ್ಷೆಆರಂಭವಾಗುವಎರಡೂವರೆಗಂಟೆಮುಂಚಿತವಾಗಿ ಕೇಂದ್ರಕ್ಕೆ ಹಾಜರಾಗಬೇಕು. ಅವರ ತಪಾಸಣೆಗಾಗಿ ಪ್ರತ್ಯೇಕ ಉಡುಪು ಪರಿಶೀಲನಾ ಅಧಿಕಾರಿಗಳನ್ನು ನೇಮಿಸಲಾಗಿದೆ. ಆರೋಗ್ಯ ಇಲಾಖೆಯ ವತಿಯಿಂದ ಇಎನ್ ಟಿ ತಜ್ಞರನ್ನು ಪ್ರತಿ ಕೇಂದ್ರದಲ್ಲಿಯೂ ನಿಯೋಜಿಸಲಾಗಿದೆ. ವದಂತಿ ಹಾಗೂ ನಕಲಿ ಸುದ್ದಿಗಳ ಹರಡುವಿಕೆಯನ್ನು ತಡೆಯಲು ಸಾಮಾಜಿಕ ಜಾಲತಾಣಗಳ ಮೇಲೆ ಪೊಲೀಸ್ ತಂಡಗಳು ಹದ್ದಿನ ಕಣ್ಣಿರಿಸಿವೆ. ವಾಟ್ಸ್‌ಪ್, ಟೆಲಿಗ್ರಾಂ, ಫೇಸ್‌ಬುಕ್ ಸೇರಿದಂತೆ ವಿವಿಧ ಮಾಧ್ಯಮಗಳಲ್ಲಿ ಸುಳ್ಳು ಮಾಹಿತಿ ಹರಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು. ಪರೀಕ್ಷೆಗೆ ಸಂಬಂಧಿಸಿದ ಅಧಿಕೃತ ಮಾಹಿತಿಗಾಗಿ ಕೆಪಿಎಸ್‌ಸಿ ಜಾಲತಾಣ ಮೂಲಕ ತಿಳಿಸಲಾಗುತ್ತದೆ ಎಂದರು.



ಉಪಲೋಕಾಯುಕ್ತ ನ್ಯಾ. ಕೆ.ಎನ್. ಫಣೀಂದ್ರ ಪ್ರವಾಸ

■ **ಉದಯರಶ್ಮಿ ದಿನಪತ್ರಿಕೆ**

ವಿಜಯಪುರ: ಕರ್ನಾಟಕ ರಾಜ್ಯದ ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ ಅವರು ನವೆಂಬರ್ 19ರಿಂದ 21ರವರೆಗೆ ವಿಜಯಪುರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ.

ನವೆಂಬರ್ 18ರಂದು ಸಂಜೆ ಬೆಂಗಳೂರಿನಿಂದ ರೈಲಿನ ಮೂಲಕ ಹೊರಟು, ನ.19ರ ಬೆಳಿಗ್ಗೆ 7.20ಕ್ಕೆ ವಿಜಯಪುರಕ್ಕೆ ಆಗಮಿಸುವರು. ಅಂದು ಬೆಳಿಗ್ಗೆ 9 ರಿಂದ 10 ಗಂಟೆಯವರೆಗೆ ದೂರುಗಳ ವಿಚಾರಣೆ ಹಾಗೂ ಪ್ರಕರಣಗಳ ವಿಲೇವಾರಿ ವಿಷಯವಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ದೂರುದಾರರು ಹಾಗೂ ಎದುರುದಾರರ ಸಭೆ ಉದ್ಘಾಟಿಸಲಿದ್ದಾರೆ. ನ.20ರಂದು ಬೆಳಿಗ್ಗೆ 10 ರಿಂದ ಸಂಜೆ 5:30ರವರೆಗೆ ಸಹ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬಾಕಿ ದೂರುಗಳು ವಿಚಾರಣೆ ನಡೆಸಲಿದ್ದಾರೆ. ನ.21ರಂದು ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ಜಿಲ್ಲೆಯ ವಿವಿಧ ಸ್ಥಳಗಳಿಗೆ ದಿಢೀರ ಭೇಟಿ ನೀಡಿ ಪರಿಶೀಲನೆ ನಡೆಸಲಿದ್ದಾರೆ. ಬಳಿಕ ಸಂಜೆ 5.40ಕ್ಕೆ ವಿಜಯಪುರದಿಂದ ರೈಲಿನ ಮೂಲಕ ಬೆಂಗಳೂ–ರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನ.17 ಮತ್ತು 18ರಂದು ಕಲಾಪ್ರತಿಭೋತ್ಸವ: ನ.16ರವರೆಗೆ ಅರ್ಜಿ ಸಲ್ಲಿಸಲು ಅವಕಾಶ

■ **ಉದಯರಶ್ಮಿ ದಿನಪತ್ರಿಕೆ**

ವಿಜಯಪುರ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಮಕ್ಕಳ ಹಾಗೂ ಯುವಜನರಲ್ಲಿನ ಕಲಾಪ್ರತಿಭೆಯನ್ನುಗುರುತಿಸಿ, ಪ್ರೋತ್ಸಾಹಿಸುವ ಉದ್ದೇಶದಿಂದ ನವೆಂಬರ್ 17 ಮತ್ತು 18ರಂದು ಕಲಾಪ್ರತಿಭೋತ್ಸವ ಆಯೋಜಿಸಲಾಗಿದೆ.ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಎರಡು ದಿನಗಳ ಕಾಲ ಕಾರ್ಯಕ್ರಮ ನಡೆಯಲಿದೆ. ಬಾಲ ಪ್ರತಿಭೆ, ಕಿಶೋರ ಪ್ರತಿಭೆ ಹಾಗೂ ಯುವ ಪ್ರತಿಭೆಗಳಿಗಾಗಿ ಆಯೋಜಿಸಿರುವ ಈ ಉತ್ಸವದಲ್ಲಿ ಭಾಗವಹಿಸಲು ಆಸಕ್ತರು ಅಗತ್ಯ ದಾಖಲೆಗಳೊಂದಿಗೆ ನವೆಂಬರ್ 16ರ ಸಂಜೆ 5.30 ಗಂಟೆಯೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ನಿಗದಿತ ಅವಧಿಯ ನಂತರ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.


ಅರ್ಜಿಗಳನ್ನು ಸಹಾಯಕ ನಿರ್ದೇಶಕರ ಕಚೇರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರ, ಸ್ಟೇಷನ್ ರಸ್ತೆ, ವಿಜಯಪುರ ಇಲ್ಲಿ ಖುದ್ದಾಗಿ ಸಲ್ಲಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಂತೋಷ ಭೋವಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಿಕೋಟ: ಮಕ್ಕಳ ವಿಜ್ಞಾನ ಜಾತ್ರೆಯ ಕಹಳೆಗೆ ಸಿದ್ಧತೆ ಪೂರ್ಣ

■ **ಉದಯರಶ್ಮಿ ದಿನಪತ್ರಿಕೆ**

ವಿಜಯಪುರ: ಜಿಲ್ಲೆಯ ತಿಕೋಟಾ ಪಟ್ಟಣದಲ್ಲಿರುವ ಬಿ. ಎಲ್. ಡಿ. ಇ ಸಂಸ್ಥೆಯ ಎ. ಬಿ. ಜತ್ತಿ ಶಾಲೆಯ ಮೈದಾನದಲ್ಲಿ ಶನಿವಾರ ಮಕ್ಕಳ ವಿಜ್ಞಾನ ಜಾತ್ರೆಯ ಕಹಳೆ ಮೊಳಗಲಿದ್ದು, ಇದಕ್ಕಾಗಿ ಎಲ್ಲ ಸಿದ್ಧತೆ ಮುಗಿದಿವೆ.

ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಅವರ ಆಶಯದಂತೆ 'ಮಕ್ಕಳ ದಿನ'ವನ್ನು ಹೀಗೆ ಜಾತ್ರೆಯಾಗಿ ಮಾರ್ಪಡಿಸುತ್ತಿರುವುದು ವಿಶೇಷ. ಬಂದ ಅತಿಥಿಗಳನ್ನು ದ್ರೋಣ ಮೂಲಕ ಸ್ವಾಗತ ಬರಹದೊಂದಿಗೆ ಬರಮಾಡಿಕೊಳ್ಳುವ ವಿಶಿಷ್ಟ ವಿಧಾನ ಅನುಸರಿಸಲಾಗಿದೆ. ಅವರನ್ನು ಸತ್ಕರಿಸುವುದರಿಂದ ಹಿಡಿದು, ಗೌರವ ಸಮರ್ಪಿಸುವ ತನಕ ಎಲ್ಲವೂ



ವಿಜ್ಞಾನದ ಆಧಾರದಲ್ಲೇ ತಯಾರಿಸಲಾದ ವಸ್ತು ವಿಶೇಷತೆಗಳಿಂದ ಕೂಡಿದ್ದು, ಹೊಸ ಮುನ್ನುಡಿಗೆ ಸಾಕ್ಷಿಯಾಗಲಿದೆ. ಅತಿಥಿಗಳಿಗೆ ಕೊಡುವ ಸ್ಮರಣಿಕೆಗಳು ಕೂಡ ವಿಜ್ಞಾನದ ಪ್ರಯೋಗಗಳ ಭಾಗವೇ ಅಗಿವೆ ಎಂದು ಪ್ರಕಟಣೆ ತಿಳಿಸಿದೆ.ಇನ್ನೂರಕ್ಕೂ ಹೆಚ್ಚು ಪ್ರಾಥ–'ಮಿಕ ಮತ್ತು ಪ್ರೌಢ ಶಾಲೆಯ ಮಕ್ಕಳು ತಾವೇ ತಯಾರಿಸಿದ ಸುಮಾರು 120 ವೈಜ್ಞಾನಿಕ ಪ್ರಯೋಗಗಳನ್ನು ಖುಷಿಯಿಂದ ವಿವರಿಸಿ, ಅವನ್ನು ತೋರಿಸಲು ಮುಂದಾಗಿದ್ದಾರೆ. ನೋಡುಗರ ಕುತೂಹಲ, ಮಕ್ಕಳ ಉತ್ಸಾಹ ತಣಿಯಲು ಇನ್ನೇನು ಕೆಲವೇ ಗಂಟೆಗಳು ಬಾಕಿ ಇದ್ದು, ಗ್ರಾಮೀಣ ಭಾಗದ ಅದರಲ್ಲೂ ಸರಕಾರಿ ಶಾಲೆಯ ಮಕ್ಕಳ ವಿಜ್ಞಾನದ ಓದಿಗೆ ಈ ಜಾತ್ರೆ ವರದಾನವಾಗಲಿದೆ.

ಗ್ರಾಮೀಣ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಬಿ.ಎಲ್.ಡಿ.ಇ ಸಂಸ್ಥೆ ಮತ್ತು ಅಗಸ್ತ್ಯ ಫೌಂಡೇಶನ್ ಸಹಯೋಗದಲ್ಲಿ ಸಕಲ ಸಿದ್ಧತೆ ಪೂರ್ಣಗೊಂಡಿವೆ. ಓದುವ ವಿಜ್ಞಾನವನ್ನು ನೇರವಾಗಿ ನೋಡುವ, ಮುಟ್ಟುವ ಮತ್ತು ಪ್ರಯೋಗಗಳ ಮೂಲಕ ತಿಳಿಯುವ ಅವಕಾಶ ಮಕ್ಕಳಿಗೆ ದೊರೆಯಲಿದೆ.

Printed by: AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR